ಸಂಪುಟ 01 । ಸಂಚಿಕೆ 246 ಮಂಗಳವಾರ 10 ನವೆಂಬರ್ 2026 । ಪುಟ 4 । ಬೆಲೆ-2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

ಶಾಂತಿ ಮತ್ತು ಅಭಿವೃದ್ಧಿಗಾಗಿ ವಿಶ್ವ ವಿಜ್ಞಾನ ದಿನ (World Science Day for Peace and Development): ಸಮಾಜದಲ್ಲಿ ವಿಜ್ಞಾನದ ಮಹತ್ವವನ್ನು ತಿಳಿಸಲು ಮತ್ತು ಶಾಂತಿ ಹಾಗೂ ಅಭಿವೃದ್ಧಿಗೆ ವಿಜ್ಞಾನವನ್ನು ಬಳಸಿಕೊಳ್ಳುವ ಉದ್ದೇಶದಿಂದ ಪ್ರತಿ ವರ್ಷ ನವೆಂಬರ್ 10 ರಂದು UNESCO ಇದನ್ನು ಆಚರಿಸುತ್ತದೆ.

2) ಸೆಸಮಿ ಸ್ಟ್ರೀಟ್ ದಿನ (Sesame Street Day)

3) ಅಂತರರಾಷ್ಟ್ರೀಯ ಅಕೌಂಟಿಂಗ್ ದಿನ (International Accounting Day)

ಸುಭಾಷಿತ

ವಿಧೇಯನಾಗಿ ಇರಲು ಕಲಿಯದವನು
ಉತ್ತಮ ನಾಯಕ ಆಗಲು ಸಾಧ್ಯವಿಲ್ಲ.

–ಅರಿಸ್ಟಾಟಲ್

ಮಾಧ್ಯಮ ಮಿತ್ರರಿಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯ ಕೋರಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ

ನೈಜ್ಯ ದೆಸೆ ನ್ಯೂಸ್

ತಾಂಡವಪುರ: ದೇಶದಲ್ಲಿ ರಾಜ್ಯದಲ್ಲಿ ಪತ್ರಿಕ ಮಾಧ್ಯಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಿಕ ಮಾಧ್ಯಮದವರಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದೀಪಾವಳಿಯ ಹಬ್ಬದ ಹಾರ್ದಿಕ ಶುಭಾಶಯ ಕೋರಿದರು ಅವರು ಬೆಂಗಳೂರಿನ ತಮ್ಮ ನಿವಾಸದಲ್ಲಿಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಎಂ.ಬಿ. ಪಾಟೀಲ್ ಅವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ದೀಪಾವಳಿ ಹಬ್ಬದ ಶುಭಾಶಯ ಕೋರಿದರು.

ಬಳಿಕ ಸಿದ್ದರಾಮಯ್ಯನವರು ಪತ್ರಿಕಾ ಮಾಧ್ಯಮದವರ ಜೊತೆ ಮಾತನಾಡುತ್ತಾ ಸಮಾಜದಲ್ಲಿನ ಅಜ್ಞಾನ, ಅಸತ್ಯ ಮತ್ತು ಅನ್ಯಾಯದ ಅಂಧಕಾರವನ್ನು ತೊಡೆದುಹಾಕಿ, ಸತ್ಯ, ನ್ಯಾಯ ಹಾಗೂ ಜನಪರ ಮೌಲ್ಯಗಳ ಬೆಳಕನ್ನು ಪಸರಿಸಲು ನಿರಂತರವಾಗಿ ಶ್ರಮಿಸುತ್ತಿರುವ ರಾಜ್ಯದ ಮಾಧ್ಯಮ ಮಿತ್ರರ ಸೇವೆ, ಕಾಳಜಿ ಮತ್ತು ಬದ್ಧತೆ ನಿಜಕ್ಕೂ ಅಭಿನಂದನಾರ್ಹ. ಸಮಾಜದ ಆಗುಹೋಗುಗಳನ್ನು ಜನರ ಮುಂದಿಡುತ್ತಾ, ಜನರ ಧ್ವನಿಯಾಗಿ, ಸಮಾಜದ ಸಾಕ್ಷಿಪ್ರಜ್ಞೆಯಾಗಿ ಕಾರ್ಯನಿರ್ವಹಿಸುತ್ತಿರುವ ಮಾಧ್ಯಮ ಕ್ಷೇತ್ರದ ಎಲ್ಲರಿಗೂ ಈ ದೀಪಾವಳಿ ಹೊಸ ಚೈತನ್ಯ, ಹೊಸ ಭರವಸೆ ಮತ್ತು ಹೊಸ ಬೆಳಕನ್ನು ತರಲಿ.

ಎಂದು ಹೇಳಿದ ಅವರು ಸಮಾನತೆ, ಸೌಹಾರ್ದತೆ ಮತ್ತು ಮಾನವೀಯ ಮೌಲ್ಯಗಳು ನೆಲೆಗೊಂಡ ಸುಂದರ ಸಮಾಜವನ್ನು ಕಟ್ಟುವವರೆಗೂ ನಿಮ್ಮ ಕಾರ್ಯ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಯಶಸ್ವಿಯಾಗಿ, ನಿರಂತರವಾಗಿ ಸಾಗಲಿ ಎಂಬುದು ನನ್ನ ಹಾರೈಕೆ. ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದೀಪಾವಳಿಯ ಹಬ್ಬದ ಶುಭಾಶಯ ಕೋರಿದರು ಮಾಧ್ಯಮ ಮಿತ್ರರು ಹಾಗೂ ಅವರ ಕುಟುಂಬವರ್ಗದವರ ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿ, ಆರೋಗ್ಯ ಮತ್ತು ಸಮೃದ್ಧಿಯ ಬೆಳಕು ಸದಾ ಬೆಳಗಲಿ. ಈ ದೀಪಾವಳಿ ನಿಮ್ಮೆಲ್ಲರ ಬದುಕಿನಲ್ಲೂ ಹೊಸ ಆಶಾಕಿರಣ ಮೂಡಿಸಲಿ. ಮತ್ತೊಮ್ಮೆ ಮಾಧ್ಯಮ ಮಿತ್ರರೆಲ್ಲ–ರಿಗೂ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯ ಕೋರಿದರು



ಸ್ಟಿಂಗ್ ಆಪರೇಷನ್ : ಮತ್ತೆ ವಿಚಾರಣೆಗೆ ಹಾಜರಾಗುವಂತೆ ಕೃಪಾ ಆಳ್ವಾಗೆ ಸಿಸಿಬಿ ನೋಟೀಸ್

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧದ ಸ್ಟಿಂಗ್ ಆಪರೇಷನ್ ಪ್ರಕರಣದ ತನಿಖೆಯನ್ನು ತೀವ್ರಗೊಳಿಸಿರುವ ಸಿಸಿಬಿ ಪೊಲೀಸರು ಮತ್ತೆ ವಿಚಾರಣೆಗೆ ಹಾಜರಾಗುವಂತೆ ಕೃಪಾ ಆಳ್ವಾಗೆ ನೋಟೀಸ್ ನೀಡಿದ್ದಾರೆ.ನಕ್ಷೆಗಳನ್ನು ನೋಡಿ



ತಮ ಮೊಬೈಲ್, ಲ್ಯಾಪ್‌ಟಾಪ್ ಸಮೇತ ಇಂದು ವಿಚಾರಣೆಗೆ ಬರುವಂತೆ ಸಿಸಿಬಿ ಅಧಿಕಾ–ರಿಗಳು ಸೂಚಿಸಿದ್ದಾರೆ. ಮೊದಲ ಸುತ್ತಿನ ವಿಚಾರಣೆ ಮುಗಿದ ನಂತರ ಕೃಪಾ ಆಳ್ವಾ ಅವರು ವಿದೇಶಕ್ಕೆ ತೆರಳಿದ್ದರು. ಅವರು ನ.7ರಂದು ರಾತ್ರಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ವಿದೇಶದಿಂದ ಮರಳಿ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ಅವರಿಗೆ ನೋಟೀಸ್ ನೀಡಿದ್ದಾರೆ.

ದೀಪಾವಳಿ ಪಟಾಕಿ ಅವಘಡ: 100ಕ್ಕೂ ಹೆಚ್ಚು ಮಂದಿಗೆ ಕಣ್ಣಿಗೆ ಗಾಯ!



ನೈಜ್ಯ ದೆಸೆ ನ್ಯೂಸ್

ಬೆಂಗಳೂರು : ದೀಪಾವಳಿ ಹಬ್ಬದ ಸಂಭ್ರಮದ ನಡುವೆ ಪಟಾಕಿ ಸಿಡಿಸುವಾಗ ಸಂಭವಿಸಿದ ಅವಘಡಗಳು ಬೆಂಗಳೂರಿನಲ್ಲಿ ಆತಂಕಕ್ಕೆ ಕಾರಣವಾಗಿವೆ. ಪಟಾಕಿಗಳಿಂದ ಕಣ್ಣಿಗೆ ಗಾಯಗೊಂಡ 100ಕ್ಕೂ ಹೆಚ್ಚು ಮಂದಿ ನಗರದ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಗಾಯಾಳುಗಳಲ್ಲಿ ಮಕ್ಕಳು ಹಾಗೂ ಪುಟ್ಟ ಕಂದಮ್ಮಗಳೂ ಸೇರಿರುವುದು ಕಳವಳ ಮೂಡಿಸಿದೆ.

ಕೆಲವರಿಗೆ ಗಂಭೀರ ಗಾಯಗಳಾಗಿದ್ದು, ಶಸ್ತ್ರಚಿಕಿತ್ಸೆಯ ಅಗತ್ಯವೂ ಎದುರಾಗಿದೆ. ಪಟಾಕಿ ಸಿಡಿಸುತ್ತಿದ್ದವರಷ್ಟೇ ಅಲ್ಲದೆ, ಅಕ್ಕಪಕ್ಕದಲ್ಲಿ ನಿಂತು ವೀಕ್ಷಿಸುತ್ತಿದ್ದವ–ರಿಗೂ ಗಾಯಗಳಾಗಿರುವುದು ಸಾರ್ವಜನಿಕ ಸುರಕ್ಷತೆಯ ಬಗ್ಗೆ ಮತ್ತೆ ಚರ್ಚೆ ಹುಟ್ಟುಹಾಕಿದೆ. ನಾರಾಯಣ ನೇತ್ರಾಲಯದಲ್ಲಿ 70 ಮಂದಿಗೆ ಚಿಕಿತ್ಸೆ ನಗರದ ರಾಜಾಜಿನಗರದಲ್ಲಿರುವ ನಾರಾಯಣ ನೇತ್ರಾಲಯದ ಕೇಂದ್ರವೊಂದರಲ್ಲೇ 41 ಕಣ್ಣಿನ ಗಾಯದ ಪ್ರಕರಣಗಳು ವರದಿಯಾಗಿವೆ. ಬೊಮ್ಮಸಂದ್ರ, ಬನ್ನೇರುಘಟ್ಟ ರಸ್ತೆ ಹಾಗೂ ವೈಟ್‌ಫೀಲ್ಡ್ ಕೇಂದ್ರಗಳಲ್ಲಿ ಒಟ್ಟು 29 ಪ್ರಕರಣಗಳು ದಾಖಲಾಗಿವೆ. ಈ ಮೂಲಕ ಆಸ್ಪತ್ರೆಯ ವಿವಿಧ ಕೇಂದ್ರಗಳಲ್ಲಿ ಒಟ್ಟು 70 ಮಂದಿ ಪಟಾಕಿ ಅವಘಡದಿಂದ ಕಣ್ಣಿನ ಗಾಯಗಳಿಗೆ ಚಿಕಿತ್ಸೆ ಪಡೆದಿದ್ದಾರೆ. ರಾಜಾಜಿನಗರ ಕೇಂದ್ರದಲ್ಲಿ ಗಾಯಗೊಂಡ 41 ಮಂದಿಯ ಪೈಕಿ 24 ಮಂದಿ 18 ವರ್ಷದೊಳಗಿನ ಮಕ್ಕಳು ಎಂಬುದು ಆತಂಕಕಾರಿ ಸಂಗತಿ. ಇವರಲ್ಲಿ 29 ಮಂದಿ ತಾವೇ ಪಟಾಕಿ ಸಿಡಿಸುವಾಗ ಗಾಯಗೊಂಡಿದ್ದರೆ,ಉಳಿದ 12 ಮಂದಿ ಪಕ್ಕದಲ್ಲಿ ನಿಂತು ನೋಡುತ್ತಿದ್ದ ಸಂದರ್ಭದಲ್ಲಿ ಗಾಯಗೊಂಡಿದ್ದಾರೆ. ಗಾಯಾಳುಗಳ ಪೈಕಿ 40 ಮಂದಿಗೆ ಔಷಧೋಪಚಾರ ನೀಡಲಾಗಿದ್ದು, ಒಬ್ಬರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಹಬ್ಬದ ಸಂಭ್ರಮದಲ್ಲಿ ಪಟಾಕಿ ಸಿಡಿಸುವಾಗ ಅಗತ್ಯ ಮುನ್ನೆಚ್ಚರಿಕೆ ವಹಿಸದಿರುವುದು ಇಂತಹ ಅವಘಡಗಳಿಗೆ ಕಾರಣವಾಗುತ್ತಿದೆ. ವಿಶೇಷವಾಗಿ ಮಕ್ಕಳ ಸುರಕ್ಷತೆಯ ಬಗ್ಗೆ ಪೋಷಕರು ಹೆಚ್ಚಿನ ಜಾಗ್ರತೆ ವಹಿಸಬೇಕಿದೆ.

ದೀಪಾವಳಿ ಹಬ್ಬದ ಪ್ರಯುಕ್ತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭೇಟಿ

ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಇಡೀ ದೇಶದ ಗಮನ ಸೆಳೆದಿರುವ ಮುಖ್ಯಮಂತ್ರಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯದ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ರವರು ಇಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಿವಾಸಕ್ಕೆ ಭೇಟಿ ನೀಡಿ ಸಿದ್ದರಾಮಯ್ಯನವರಿಗೆ ಹೂಗುಚ್ಛ ನೀಡಿ ಗೌರವಿಸಿ ಬೆಳಕಿನ ಹಬ್ಬ ದೀಪಾವಳಿಯ ಹಬ್ಬದ ಹಾರ್ದಿಕ ಶುಭಾಶಯ ಕೋರಿದರು.

ಅದೇ ರೀತಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೂಡ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ದೀಪಾವಳಿಯ ಹಬ್ಬದ



ಹಾರ್ದಿಕ ಶುಭಾಶಯ ಕೋರಿ ಕೆಲವು ಸಮಯ ಮಾತುಕತೆ ನಡೆಸಿದರು ಈ ಹಬ್ಬದ ಸಂದರ್ಭದಲ್ಲಿ ಈಗಿನ ರಾಜ–ಕೀಯ ಬೆಳವಣಿಗೆ ಮತ್ತು ರಾಜ್ಯದ ರೈತರು ಮತ್ತು ಸಾರ್ವಜನಿಕರ ಹಾಗೂ ಬಡವರ ಅಭಿವೃದ್ಧಿಯ ಬಗ್ಗೆ ಚರ್ಚೆ ನಡೆಸಿದರು ಎಂದು ಹೇಳಲಾಗಿದ್ದು ಈ ಸಂದರ್ಭದಲ್ಲಿ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎ.ಎಸ್. ಪೊನ್ನಣ್ಣ ರವರು ಹಾಗೂ ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು

ಉದ್ಯೋಗಿಗಳಿಗೆ ತಲಾ 1 ಲಕ್ಷ ರೂ ನಗದು ದೀಪಾವಳಿ ಬೋನಸ್ ನೀಡಿದ ಉದ್ಯಮಿ

ನೈಜ್ಯ ದೆಸೆ ನ್ಯೂಸ್

ಸೂರತ್: ಸಾಮಾನ್ಯವಾಗಿ ಉದ್ಯೋಗಿಗಳಿಗೆ ದೀಪಾವಳಿ ಬೋನಸ್ ಎಂದರೆ ಹೆಚ್ಚುವರಿ ಒಂದು ತಿಂಗಳ ವೇತನ, ಸಿಹಿತಿಂಡಿ ಬಾಕ್ಸ್ ಅಥವಾ ಡ್ರೈಫ್ರೂಟ್ಸ್ ಉಡುಗೊರೆ. ಆದರೆ ಇಲ್ಲಿನ ಜವಳಿ ಉದ್ಯಮಿಯೊಬ್ಬರು ತಮ್ಮ ಉದ್ಯೋಗಿಗಳಿಗೆ ಈ ಬಾರಿ ನೀಡಿರುವ ದೀಪಾವಳಿ ಉಡ–ುಗೊರೆ ಎಲ್ಲರ ಗಮನ ಸೆಳೆದಿದೆ. ಸೂರತ್‌ನ ಜವಳಿ ಉದ್ಯಮಿ ರಾಮ್‌ಸ್ವರೂಪ್ ಮುಂಡೆ ಅವರು ತಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುವ 20 ಉದ್ಯೋಗಿಗಳಿಗೆ ತಲಾ 1 ಲಕ್ಷ ರೂ.ಗೂ ಅಧಿಕ ನಗದು ಹಣವನ್ನು ದೀಪಾವಳಿ ಉಡುಗೊರೆಯಾಗಿ ನೀಡಿದ್ದಾರೆ. ಈ ವಿಶಿಷ್ಟ ಬೋನಸ್ ವಿತರಣೆಯ ವಿಡಿಯೋ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.



ಈ ಉಡುಗೊರೆಯ ವಿಶೇಷತೆಯೆಂದರೆ ಹಣವನ್ನು ಸಾಮಾನ್ಯವಾಗಿ ಲಕೋಟೆಯಲ್ಲಿ ನೀಡುವ ಬದಲು, ಅಲಂಕೃತ ಪೂಜಾ ತಟ್ಟೆಗಳಲ್ಲಿ ನಗದು ರೂಪದಲ್ಲಿ ನೀಡಲಾಗಿದೆ.ಬೆಳ್ಳಿ ಬಣ್ಣದ ಪೂಜಾ ತಟ್ಟೆಗಳಲ್ಲಿ 10 ರೂ.ನಿಂದ 500 ರೂ. ವರೆಗಿನ ವಿವಿಧ ಮುಖಬೆಲೆಯ ಹೊಸ ನೋಟುಗಳ ಕಂತೆಗಳನ್ನು ಅಚ್ಚುಕಟ್ಟಾಗಿ ಜೋಡಿಸಿ ಉದ್ಯೋಗಿಗಳಿಗೆ ನೀಡಲಾಗಿದೆ. ಇನ್ನೊಂದು ವಿಶೇಷವೆಂದರೆ, ಉದ್ಯೋಗಿಗಳ ಪತ್ನಿಯರೇ ಹಣ ತುಂಬಿದ ಈ ತಟ್ಟೆಗಳನ್ನು ತಮ ಪತಿಯರಿಗೆ ಉಡುಗೊರೆಯಾಗಿ ನೀಡಿದ್ದಾರೆ. ಇದರಿಂದ ದೀಪಾವಳಿ ಸಂಭ್ರಮ ಕುಟುಂಬದ ಸದಸ್ಯರ ನಡುವಿನ ಭಾವನಾತ್ಮಕ ಕ್ಷಣಕ್ಕೂ ಸಾಕ್ಷಿಯಾಗಿದೆ.

ನಶಾ ಮುಕ್ತ ರಾಯಚೂರು, ತಂಬಾಕು ಮುಕ್ತ ಯುವ ಅಭಿಯಾನ ಜಾಗೃತಿ ನಡಿಗೆ ಜೀವನ ಹಾಳು ಮಾಡುವ ಗಾಂಜಾ, ತಂಬಾಕುಗಳಿಂದ ದೂರವಿರಿ: ಆಯುಕ್ತ ಜುಬಿನ್

ನೈಜ್ಯ ದೆಸೆ ನ್ಯೂಸ್

ರಾಯಚೂರು: ಗಾಂಜಾ ಮತ್ತು ತಂಬಾಕು ಪದಾಥ–ರ್ಗಗಳ ಸೇವನೆಯಿಂದ ದೂರವಿರುವುದು ನಿಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ರಕ್ಷಿಸಲು ಅತ್ಯಂತ ಮಹತ್ವದ ನಿರ್ಧಾರವಾಗಿದೆ. ಇವುಗಳ ಬಳಕೆಯು ಕೇವಲ ವೈಯಕ್ತಿಕ ಆರೋಗ್ಯವನ್ನಷ್ಟೇ ಅಲ್ಲದೆ, ಇಡೀ ಕುಟುಂಬದ ನೆಮ್ಮದಿಯನ್ನು ಹಾಳುಗೆಡವುತ್ತದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಅವರು ಹೇಳಿದರು. ಇತ್ತೀಚೆಗೆ ನಗರದ ನಗರದ ಶೆಟ್ಟಿ ಬಾವಿ ಚೌಕ್‌ದಿಂದ ಹರಿಜನವಾಡದ ನಾಗರಕಟ್ಟೆ ದೇವಸ್ಥಾನದವರೆಗೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ಪೊಲೀಸ್ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಹಾಗೂ ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ ನಶಾ ಮುಕ್ತ



ರಾಯಚೂರು ಹಾಗೂ ತಂಬಾಕು ಮುಕ್ತ ಯುವ ಅಭಿಯಾನ 4.0ರ ಜಾಗೃತಿ ನಡಿಗೆ ಹಾಗೂ ಜಾಗೃತಿ ನಾಟಕಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ದೇಹದ ಸದೃಡತೆ, ದೈಹಿಕ ಕ್ಷಮತೆಗೆ, ಬುದ್ದಿಮಟ್ಟದ ಬೆಳವಣಿಗೆ ಅಥವಾ ಕುಟುಂಬದ ಏಳ್ಗೆಗೆ ಏನನ್ನು ಸಹಾಯ ಮಾಡದ, ಮತ್ತು ಬರಿಸುವ, ಅಮಲು ತರಿಸುವ ವ್ಯಕ್ತಿತ್ವ, ಕುಟುಂಬವನ್ನೆ ನಾಶ ಮಾಡುವ ನಶಾ ಪದಾರ್ಥಗಳನ್ನು ನಾವೆಲ್ಲರೂ ಸೇರಿ ಸಮುದಾಯದಿಂದ ದೂರ ಮಾಡಬಾಕಿದೆ ಎಂದರು. ಒಮ್ಮೆ ಹವ್ಯಾಸವಾಗಿ ಬಳಸಲು ಆರಂಭವಾದ ನಂತರ ಚಟವಾಗಿ ಬದಲಾಗುವ ನಶಾ ಪದಾರ್ಥಗಳಾದ, ಗಾಂಜಾ, ಅಫೀಮು, ಚರಸ್, ಹೆರಾಯಿನ್ ಹಾಗೂ ತಂಬಾಕು ಹಾಗೂ ಅದರ ಉತ್ಪನ್ನಗಳಾದ ಸಿಗರೇಟ್, ಬೀಡಿ, ಹುಕ್ಕಾ ಹಾಗೂ ಮಧ್ಯಪಾನದಂತಹ ಅದರಲ್ಲೂ ಜಿಲ್ಲೆಯ ಕೆಲವು ಸ್ಥಳಗಲ್ಲಿ ಸಿಹೆಚಗ ಪೌಡರ್‌ನಿಂದ ತಯಾರಿಸಿದ ನಕಲಿ ಸೆಂಧೀ ಯಂತಹ ವಸ್ತುಗಳು ವ್ಯಕ್ತಿಯ ವ್ಯಕ್ತಿತ್ವವನ್ನು ನಾಶ ಮಾಡುವ ಜೊತೆಗೆ ಕುಟುಂಬದ ಗೌರವವನ್ನು ಸಹ ಕುಂದಿಸುತ್ತವೆ ಎಂದರು. ದೇಶಾದ್ಯಂತ 2020ರ ಆಗಷ್ಟ 15ರಂದು ಜಾಗೃತಿ ಅಭಿಯಾನವನ್ನು ಆರಂಭಿಸಿದ್ದು, ರಾಯಚೂರು ಜಿಲ್ಲೆಯ ಜನತೆಗೆ ನಶಾ ಪದಾರ್ಥಗಳ ಸೇವನೆಯಿಂದಾಗುವ ಹಾನಿ, ದುಷ್ಪರಿಣಾಮಗಳ ಕುರಿತು ಜಿಲ್ಲಾಡಳಿತದ ಮಾರ್ಗದರ್ಶನದಲ್ಲಿ ನಗರ, ಗ್ರಾಮಗಳಲ್ಲಿ ಕಾಲೇಜು ವಿಧ್ಯಾರ್ಥಿಗಳಿಗೆ, ಸ್ಲಂ ಪ್ರದೇಶಗಳಲ್ಲಿ ಜಾಗೃತಿ ನೀಡಲಾಗುತ್ತಿದ್ದು, ನಶಾ ಪದಾರ್ಥಗಳ ಸೇವನೆ ಮಾಡಿದಾಗ ಹಲ್ಲೆ ಮಾಡುವ, ಮನೆಯ ಕೌಟುಂಬದ ಸದಸ್ಯರಿಂದ ನಿರ್ಲಕ್ಷ್ಯಕ್ಕೆ ಒಳಗಾಗುವ, ಆರ್ಥಿಕ ಸಂಕಷ್ಟದ ಸಮಸ್ಯೆಗಳಿಗೆ ಈಡಾಗುವುದನ್ನು ಮನವರಿಕೆ ಮಾಡಲು, ಅದರಲ್ಲೂ ಈ ಕುರಿತು ಯುವಕರಿಗೆ ಹೆಚ್ಚಿನ ಜಾಗೃತಿ ನೀಡೋಣವೆಂದರು. ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಂದಿತಾ ಎಮ್.ಎನ್. ಅವರು ಮಾತನಾಡಿ, ನಶಾ ಪದಾರ್ಥಗಳನ್ನು ಸೇವಿಸುವ ವ್ಯಕ್ತಿಯು ಗಂಭೀರ ಆರೋಗ್ಯ ಸಮಸ್ಯೆಗಳಾದ ಕ್ಯಾನ್ಸರ್ (ವಿಶೇಷವಾಗಿ ಶ್ವಾಸಕೋಶ ಮತ್ತು ಬಾಯಿ ಕ್ಯಾನ್ಸರ್), ಲಿವರ್ ಸಿರೋಸಿಸ್, ಹೃದಯಾಘಾತ, ಪಾರ್ಶ್ವವಾಯು, ಮತ್ತು ಮಾನಸಿಕ ಆರೋಗ್ಯದ ಸಮಸ್ಯೆಗಳಾದ ಖಿನ್ನತೆ, ಮಾನಸಿಕ ಅಸ್ವಸ್ಥತೆ, ಆತ್ಮಹತ್ಯೆಯಂತ ಪ್ರಯತ್ನಗಳಿಗೆ ಒಳಗಾಗುವುದು ಕಾಣುತ್ತಿದ್ದೇವೆ. ಅಲ್ಲದೆ ತಂಬಾಕು ಮುಕ್ತ ಯುವ ಅಭಿಯಾನ 4.0ಅಡಿಯಲ್ಲಿ ಜಿಲ್ಲೆಯಾದ್ಯಂತ 2026ರ ಡಿಸೆಂಬರ್ ತಿಂಗಳವರೆಗೆ ತಂಬಾಕು ಸೇವೆಯಿಂದಾಗುವ ದುಷ್ಪರಿಣಾಮಗಳನ್ನು ತಡೆಯಲು ಕೋಟ್ಪಾ ಕಾಯ್ದೆ 2003ರ ಪರಿಣಾಮಕಾರಿ ಅನುಷ್ಠಾನದ ಜಾಗೃತಿ ಕಾರ್ಯ ನಡೆಯುವುದು ಎಂದರು.

ಡಿ–ಅಡಿಕ್ಷನ್ ಕೇಂದ್ರ: ಈಗಾಗಲೇ ರಾಯಚೂರಿನಲ್ಲಿ ವ್ಯಸನದಿಂದ ಮುಕ್ತಿ ಪಡೆಯಲು ರಿಮ್ಸ್ ಆಸ್ಪತ್ರೆಯ ಬಿ–ಬ್ಲಾಕ್ ರೂಮ್ ನಂಬರ್–27ರಲ್ಲಿ ಕೌನ್ಸಿಲಿಂಗ್ ಸಹಾಯ ಪಡೆಯಲು ವ್ಯವಸ್ಥೆ ಮಾಡಲಾಗಿದೆ. ಹಾಗೂ ಉಚಿತ ಮಾನಸಿಕ ಆರೋಗ್ಯ ಸಹಾಯವಾಣಿ 14416 ಸದುಪಯೋಗ ಪಡೆಯಬಹುದಾಗಿದೆ ಎಂದರು.

ಜಾಗೃತಿ ನಾಟಕ: ನಶಾ ಪದಾರ್ಥಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಕು–ರಿತು ಹರಿಜನವಾಡಾದಲ್ಲಿ ವೈದ್ಯಾಧಿಕಾರಿ, ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಜನತೆಗೆ ಮನ ಮುಟ್ಟುವಂತೆ ಕಿರು ನಾಟಕ ಪ್ರದರ್ಶಿಸಿ, ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು. ಇದೇ ಆರೋಗ್ಯ ಕಾರ್ಯಕ್ರಮಗಳ ಜಿಲ್ಲಾ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳಾದ ಡಿಎಸ್‌ಓ ಡಾ.ಗಣೇಶ್ ಕೆ, ಆರ್‌ಸಿಹೆಚ್‌ಓ ಡಾ.ಶಾಕೀರ್ ಮೋಯಿನುದ್ದೀನ್,

ಡಿಎಫ್‌ಡಬ್ಲ್ಯುಓ ಡಾ.ಶಿವಕುಮಾರ್ ನಾರಾ, ಡಿಟಿಓ ಡಾ.ಯಶೋಧಾ, ಡಿಎಲ್‌ಓ ಡಾ.ಅಮೃತ್ ಹುಕ್ಕೇರಿ, ತಾಲೂಕಾ ಆರೋಗ್ಯಾಧಿಕಾರಿ ಡಾ.ಲಕ್ಷ್ಮಿಕಾಂತ, ಮನೋರೋಗ ತಜ್ಞ ಡಾ.ಮನೋಹರ ಪತ್ತಾರ, ಪಾಲಿಕೆ ಪರಿಸರ ಅಭಿಯಂತರ ಜಯಪಾಲರೆಡ್ಡಿ, ವೈದ್ಯಾಧಿಕಾ–ರಿಗಳಾದ ಡಾ.ಸುನೀಲ್, ಡಾ.ಗುಂಡಮ್ಮ, ಡಾ.ಶ್ವೇತಾಂಬರಿ, ಡಾ.ಸುನೀತಾ ಸೇರಿದಂತೆ ಮಹಾನಗರ ಪಾಲಿಕೆ, ಪೋಲಿಸ್, ಆರೋಗ್ಯ ಇಲಾಖೆಯ ಸಿಬ್ಬಂದಿಯವರು, ಆಶಾ ಕಾರ್ಯಕರ್ತೆಯರು, ಸಾರ್ವಜನಿಕರು ಇದ್ದರು.

ಸಾಹಿತ್ಯ ಸಿಂಚನ

ಭೂರಮೆ

ಹೇ ತಾಯಿಯೇ!..
ಭೂ ಮಾತೆಯೇ!..
ನಮ್ಮಾ ಜೀವಧಾತ್ರಿಯೇ!..
ನಮ್ಮಾ ಜೀವಧಾತ್ರಿಯೇ!..

ಎಂಥಾ ವಿಸ್ಮಯ ನಿನ್ನಯ ಒಡಲು!
ಜೀವಕ್ಕಾಸರೆ ನಿನ್ನಯ ಮಡಿಲು!
ತುಂಬಿ ತುಳುಕುತ್ತಿದೆ ನಿನ್ನೊಳು,
ಅಮೃತದಾ, ಸವಿಜೇನ ಕಡಲು.

ಗಿರಿ–ಪರ್ವತಗಳ ಸೃಷ್ಟಿಸಿರುವೆ,
ಸಾಹಸಿಗಳ ನಿದ್ದೆಗೆಡಿಸಿರುವೆ;
ಹಚ್ಚ–ಹಸಿರ ಹರಡಿರುವೆ,
ಸೌಂದರ್ಯವ ನೀ ಸೂಸಿರುವೆ!

ಜಲವ ಹೊತ್ತು ನಿಂತಿರುವೆ,
ಜೀವಿಗಳ ಜೀವ ಹಿಡಿದಿರುವೆ;
ಜಲಪಾತದ ಸೊಬಗ ಕರುಣಿಸಿ
ಜನಮನವ ನೀ ತಣಿಸಿರುವೆ.

ಹಸಿರ ನೀನು ಹೊದ್ದಿರಲು,
ಜೀವಿಗಳ ಉಸಿರು ಸಾಗುತಿಹುದು;
ಜೀವ ನೀಡುವ ಮಣ್ಣಿರಲು,
ಸಕಲ ಬದುಕು ಸಾಗುತಿಹುದು.

ಕುದಿಯುವ ಜ್ವಾಲಾಗ್ನಿ ನಿನ್ನೊಳಿದ್ದರೂ,
ಶಾಂತ ಸ್ವರೂಪಿಣಿ ನೀನು.
ಬಿರುಗಾಳಿ, ಭೂಕಂಪ ಭುಗಿಲೆದ್ದರೂ,
ಸಹನಾಮೂರ್ತಿ ತಾಯಿ ನೀನು.

ನಿನ್ನ ಗರ್ಭದಿ ಅವಿತ ಖನಿಜಗಳಿಂದ,
ಅರಳಿವೆ ಮನುಜರ ಮನಗಳು;
ಹೆಕ್ಕಿ ತೆಗೆದು ಸಿದ್ಧಗೊಳಿಸಲು,
ಉರುಳುತ್ತಿವೆ ಬಾಳಿನ ದಿನಗಳು.

ಪಂಚಭೂತಗಳ ನೀ ಕರುಣಿಸಿ,
ಪ್ರಾಣವು ನೆಲೆಸಲು ಕಾರಣಳಾದೆ;
ಸಕಲ ಜೀವರಾಶಿಯ ಬದುಕಿಸಿ,
ಪ್ರತ್ಯಕ್ಷ ದೇವತೆ ನೀನಾದೆ!

ಡಾ ಮಹೇಂದ್ರ ಕುರ್ಡಿ

ಸಿರವಾರದಲ್ಲಿ ದೀಪಾವಳಿ ಹಬ್ಬದ ಸಂಭ್ರಮ: ಬೆಳಗ್ಗೆಯಿಂದಲೇ ಹೂವು, ಹಣತೆ ವ್ಯಾಪಾರ ಜೋರು

ಮಾರುಕಟ್ಟೆಯಲ್ಲಿ ಜನಜಂಗುಳಿ – ಹಬ್ಬದ ಖರೀದಿಯಲ್ಲಿ ತೊಡಗಿದ ಸಾರ್ವಜನಿಕರು

ನೈಜ್ಯ ದೆಸೆ ನ್ಯೂಸ್

ಸಿರವಾರ: ಬೆಳಕಿನ ಹಬ್ಬ ದೀಪಾವಳಿಯ ಸಂಭ್ರಮ ಸಿರವಾರ ಪಟ್ಟಣದಲ್ಲಿ ಮನೆಮಾಡಿದ್ದು, ಹಬ್ಬದ ಹಿನ್ನೆಲೆಯಲ್ಲಿ ಸೋಮವಾರ ಬೆಳಗ್ಗೆಯಿಂದಲೇ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಹೂವು, ಮಣ್ಣಿನ ಹಣತೆ, ಬಾಳೆಕಂಬ ಸೇರಿದಂತೆ ಪೂಜಾ ಸಾಮಗ್ರಿಗಳ ವ್ಯಾಪಾರ ಭರ್ಜರಿಯಾಗಿ ನಡೆದಿದೆ.

ಪಟ್ಟಣದ ಮುಖ್ಯ ರಸ್ತೆ, ಬಸ್ ನಿಲ್ದಾಣದ ಸುತ್ತಮುತ್ತ ಹಾಗೂ ಪೇಟೆ ಬೀದಿಗಳಲ್ಲಿ ವ್ಯಾಪಾರಸ್ಥರು ಬೆಳಗ್ಗೆಯೇ ಅಂಗಡಿಗಳನ್ನು ತೆರೆದು ವ್ಯಾಪಾರ ಆರಂಭಿಸಿದ್ದಾರೆ. ರಸ್ತೆಯ ಇಕ್ಕೆಲಗಳಲ್ಲಿ ಹೂವಿನ ಅಂಗಡಿಗಳು ತಲೆ ಎತ್ತಿದ್ದು, ಹಬ್ಬದ ಖರೀದಿಗಾಗಿ ಸಾರ್ವಜನಿಕರು ಮಾರುಕಟ್ಟೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿರುವುದು ಕಂಡುಬಂತು.

ಹೂವಿಗೆ ಉತ್ತಮ ಬೇಡಿಕೆ: ಕೆಜಿಗೆ –80ರಿಂದ –100 ಈ ಬಾರಿ ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಚೆಂಡು ಹೂವು ಹಾಗೂ ಸೇವಂತಿಗೆ ಹೂವಿಗೆ ಉತ್ತಮ ಬೇಡಿಕೆ ಕಂಡುಬಂದಿದೆ.



ಹೂವಿನ ಗುಣಮಟ್ಟಕ್ಕೆ ಅನುಗುಣವಾಗಿ ಪ್ರತಿ ಕೆಜಿಗೆ 80ರಿಂದ 100 ರೂಪಾಯಿವರೆಗೆ ಮಾರಾಟವಾಗುತ್ತಿದೆ. ಹೂವಿನ ಮಾಲೆಗಳಿಗೆ ಪ್ರತ್ಯೇಕ ದರವಿದ್ದು, ಗ್ರಾಹಕರು ತಮ್ಮ ಅಗತ್ಯಕ್ಕೆ ತಕ್ಕಂತೆ ಖರೀದಿ ಮಾಡುತ್ತಿದ್ದಾರೆ.

ಇದರ ಜೊತೆಗೆ ಮನೆಗಳ ಮುಂದೆ ಅಲಂಕಾರ ಮಾಡಲು ಬೇಕಾದ ಬಾಳೆಕಂಬ, ಬೂದುಗುಂಬಳಕಾಯಿ ಹಾಗೂ ಮಣ್ಣಿನ ಹಣತೆಗಳಿಗೂ ಬೇಡಿಕೆ ಹೆಚ್ಚಾಗಿದೆ. ಮಣ್ಣಿನ ಹಣತೆಗಳು ಒಂದಕ್ಕೆ 5ರಿಂದ 10 ರೂಪಾಯಿವರೆಗೆ ಮಾರಾಟವಾಗುತ್ತಿದ್ದು, ಸಾಂಪ್ರದಾಯಿಕ ಮಣ್ಣಿನ ಹಣತೆಗಳ ಖರೀದಿಗೆ ಜನರು ಆಸಕ್ತಿ ತೋರುತ್ತಿದ್ದಾರೆ. ಗ್ರಾಮೀಣ ಭಾಗದ ಜನರ ಆಗಮನ



ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಮನೆಗಳನ್ನು ಸ್ವಚ್ಛಗೊಳಿಸಿ, ಬಾಗಿಲು ಮತ್ತು ಅಂಗಳಗಳನ್ನು ಹೂವುಗಳಿಂದ ಅಲಂಕರಿಸಿ, ದೀಪಗಳನ್ನು ಬೆಳಗಿಸುವ ಸಂಪ್ರದಾಯಕ್ಕೆ ಬೇಕಾದ ಪೂಜಾ ಸಾಮಗ್ರಿಗಳು ಮಾರುಕಟ್ಟೆಯಲ್ಲಿ ಲಭ್ಯವಾಗಿವೆ.

ಸಿರವಾರ ಪಟ್ಟಣದ ಸುತ್ತಮುತ್ತಲಿನ ಗ್ರಾಮಗಳಿಂದಲೂ ಜನರು ಆಗಮಿಸಿ ಹಬ್ಬದ ಸಾಮಗ್ರಿಗಳನ್ನು ಖರೀದಿಸುತ್ತಿದ್ದಾರೆ. ಒಟ್ಟನಲ್ಲಿ ದೀಪಾವಳಿ ಹಬ್ಬದ ಸಂಭ್ರಮದಿಂದ ಸಿರವಾರದ ಮಾರುಕಟ್ಟೆ ಕಳೆಗಟ್ಟಿದ್ದು, ವ್ಯಾಪಾರಸ್ಥರಲ್ಲಿಯೂ ಹಬ್ಬದ ವ್ಯಾಪಾರದ ಉತ್ಸಾಹ ಕಂಡುಬಂದಿದೆ. ಬೆಳಕಿನ ಹಬ್ಬದ ಸಂಭ್ರಮ ಪಟ್ಟಣದಾದ್ಯಂತ ಹಬ್ಬದ ವಾತಾವರಣವನ್ನು ನಿರ್ಮಿಸಿದೆ.

ನಾಡಿನ ಸಮಸ್ತ ಜನತೆಗೆ ನರಕ ಚತುರ್ದಶಿ ಹಾಗೂ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯ ಕೋರಿದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಸ್ ಯತೀದ್ರ ಸಿದ್ದರಾಮಯ್ಯ

ನೈಜ್ಯ ದೆಸೆ ನ್ಯೂಸ್

ತಾಂಡವಪುರ: ನಾಡಿನ ಸಮಸ್ತ ಜನತೆಗೆ ನರಕ ಚತುರ್ದಶಿ ಹಾಗೂ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯ ಕೋ–ರಿದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಸ್ ಯತೀದ್ರ ಸಿದ್ದರಾಮಯ್ಯ ರವರು ಬೆಂಗಳೂರಲ್ಲಿ ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡುತ್ತಾ.

ದೀಪಾವಳಿ ಹಬ್ಬ ಬೆಳಕಿನ ಹಬ್ಬ ಕತ್ತಲಿಂದ ಬೆಳಕಿನೆಡೆಗೆ ಸಾಗುವ ದೀಪಾವಳಿ ಹಬ್ಬ ಅಷ್ಟೇ ಅಲ್ಲ ಗ್ರಾಮೀಣ ಭಾಗದ ರೈತ ವರ್ಗದ ಸುಗ್ಗಿಯ ಹಬ್ಬ ಕೂಡ ಇದು ಎಂದು ಹೇಳಿದ ಸಚಿವರು ಅಜ್ಞಾನ ಹಾಗೂ ಕೆಡುಕಿನ ಮೇಲಿನ ಸಜ್ಜನಿಕೆಯ ವಿಜಯದ ಸಂಕೇತವಾದ ನರಕ ಚತುರ್ದಶಿ ಮತ್ತು ದೀಪಾವಳಿಯು ಪ್ರತಿಯೊಬ್ಬರ ಜೀವನದಲ್ಲೂ ಹೊಸ ಭರವಸೆ ಹೊಸ, ಚೈತನ್ಯ ಹಾಗೂ ಕ್ರಾಂತಿಕಾರಿ ಬೆಳಕನ್ನು ತರಲಿ. ಜನತೆಯ ಬಾಳು ಸದಾ ಬೆಳಗುವಂತಾಗಲಿ ಎಂದು ಸಚಿವರು ನಾಡಿನ ಜನತೆಗೆ ದೀಪಾವಳಿಯ ಹಬ್ಬದ ಹಾರ್ದಿಕ ಶುಭಾಶಯ ಕೋರಿದರು ದೀಪಾವಳಿಯ ಹಬ್ಬದ ಪ್ರಯುಕ್ತ ಪಟಾಕಿ ಹಚ್ಚುವ ಸಂದರ್ಭದಲ್ಲಿ ಎಚ್ಚರವಹಿಸಿ ದೀಪಾವಳಿಯ ಈ ಸಂದರ್ಭದಲ್ಲಿ,

ನಮ್ಮ ನಗರಗಳು ಕೇವಲ ದೀಪಗಳ ಸಾಲಿನಿಂದಷ್ಟೇ ಅಲ್ಲದೆ ಸ್ವಚ್ಛತೆ,



ಸುಸ್ಥಿರ ಅಭಿವೃದ್ಧಿ, ಹಸಿರು ಮತ್ತು ನವೀನ ಮೂಲಸೌಕರ್ಯಗಳ ಬೆಳಕಿನಿಂದ ಕಂಗೊಳಿಸಲಿ. ಪರಿಸರಸ್ನೇಹಿ ಆಚರಣೆಯ ಮೂಲಕ ನಮ್ಮ ನಗರ ಹಾಗೂ ಪಟ್ಟಣಗಳನ್ನು ಮಾಲಿನ್ಯಮುಕ್ತವಾಗಿಸಿ, ಪ್ರತಿಯೊಬ್ಬರಿಗೂ ಸುರಕ್ಷಿತ ವಾತಾವರಣ ನಿರ್ಮಿಸುವುದು ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ. ಸಾಂಪ್ರದಾಯಿಕ ಸೌಹಾರ್ದತೆ ಮತ್ತು ಸಹೋದರತ್ವದ ಬೆಸುಗೆಯೊಂದಿಗೆ, ಈ ದೀಪಾವಳಿಯು ನಾಡಿನ ಪ್ರತಿಯೊಂದು ಮನೆ–ಮನಗಳಲ್ಲೂ ಆರೋಗ್ಯ, ಸಂಪತ್ತು, ಶಾಂತಿ ಹಾಗೂ ಸಮೃದ್ಧಿಯನ್ನು ತರಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ. ಎಂದು ಸಚಿವರು ಹೇಳಿದರು

ಅರಕೇರಾ ಪಟ್ಟಣದಲ್ಲಿ ಶ್ರೀಸೂಗೂರೇಶ್ವರ ಕಾರ್ತಿಕೋತ್ಸವ ಪ್ರಾರಂಭ

ನೈಜ್ಯ ದೆಸೆ ನ್ಯೂಸ್

ಅರಕೇರಾ: ಪಟ್ಟಣದಲ್ಲಿನ ಶ್ರೀಸೂಗೂರೇಶ್ವರ ದೇವಸ್ಥಾನದಲ್ಲಿ ಪ್ರತಿವರ್ಷದಂತೆ ಈವರ್ಷವುಕೂಡ ಶ್ರೀ ಪರಾಭವ ನಾಮ ಸಂವತ್ಸರ ಕಾರ್ತೀಕ ಮಾಸ ಶುಕ್ಲಪಕ್ಷ ದಿನಾಂಕ 10–11–2026 ರಂದು ಮಂಗಳವಾರ ದಿನದಂದು ಸಾಯಂಕಲಾ 6–30 ನಿಮಿಷಕ್ಕೆ ಕಾರ್ತಿಕೋತ್ಸವ ಪ್ರಾರಂಭವಾಗುವುದು.ಶ್ರೀ ಚಂದ್ರಶೇಖರಯ್ಯಸ್ವಾಮಿ ಹೀರೆಮಠ ಅರಕೇರಾ ಇವರ ಸಾನಿದ್ಯೆದಲ್ಲಿ ಜರುಗುವುದು.



ಶ್ರೀಚಂದ್ರಶೇಖರ ಶೆಟ್ಟಿಯವರ ಮನೆಯಿಂದ ಗ್ರಾಮದಲ್ಲಿನ ದೇವಸ್ಥಾನಗಳಿಗೆ ತೆರಳಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವುದಕ್ಕಾಗಿ ಮಹಾಸೇವಕಾರ್ಯಕ್ರಮ ಜರುಗುವುದು ನಂತರ ಶ್ರೀಸೂಗೂರೇಶ್ವರ ದೇವಸ್ಥಾನದಲ್ಲಿ ಸಾಯಂಕಲಾ 5 ಜನ ಭಕ್ತರಿಂದ ಕಂಕಣ ಕಟ್ಟುವ ಮೂಲಕ ಕಾರ್ತಿಕೋತ 'ವಪ್ರಾರಂಭವಾಗುವದು ಇಂದಿನಿಂದ ಸುಮಾರು 1 ತಿಂಗಳಕಾಲ ಸಾಯಂಕಲಾ 7 ಗಂಟೆಯಿಂದ 8 ರವರಗೆ ಪಲ್ಲಕಿಸೇವೆ , ವಡುವು,ವಚನಗಳು.ಭಕ್ತ–ರಿಂದ ನಂದಿಕೋಲಸೇವೆ. ನಡೆಯುವದು ಛೆಟ್ಟಿ ಅಮವ್ಯಾಸೆಯಾದ 5 ದಿವಸದಿಂದ ಜಾತ್ರೆ ಪ್ರಾರಂಭವಾಗುವುದು.

ಜಾಲಹಳ್ಳಿ ಯ ಪರಾಪೂರ ಕೆರೆಯ ಹೆಚ್ಚುವರಿ ನೀರು ಸಂಗ್ರಹಕ್ಕೆ ಅಮೃತ ಸರೋವರ ನಿರ್ಮಾಣ: ಗ್ರಾಮ ಪಂಚಾಯಿತಿ ಆಡಳಿತ ಮಂಡಳಿಯ ಕಾರ್ಯಕ್ಕೆ ಮೆಚ್ಚುಗೆ

ಬೇಸಿಗೆಯಲ್ಲೂ ಜಾನುವಾರುಗಳಿಗೆ ನೀರು, ರೈತರ ಕೃಷಿ ಚಟುವಟಿಕೆಗಳಿಗೆ ಅನುಕೂಲ; ಮೀನು ಸಾಕಣೆ ಹಾಗೂ ಪಕ್ಷಿಗಳ ಆಶ್ರಯ ತಾಣವಾಗಿ ರೂಪುಗೊಂಡ ಅಮೃತ ಸರೋವರ



ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ಜಾಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪರಾಪೂರ ಕೆರೆ ತುಂಬಿದಾಗ ಹರಿದು ಹೋಗುವ ಹೆಚ್ಚುವರಿ ನೀರನ್ನು ಸಂಗ್ರಹಿಸುವ ಉದ್ದೇಶದಿಂದ 2023–24ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿಯು ಅಮೃತ ಸರೋವರ ಯೋಜನೆಯಡಿ ನಿರ್ಮಿಸಿದ ಕೆರೆ ಇಂದು ಸ್ಥಳೀಯರಿಗೆ ಹಲವು ರೀತಿಯಲ್ಲಿ ಅನುಕೂಲವಾಗುತ್ತಿದೆ.

ಅಮೃತ ಸರೋವರವು ಸಣ್ಣ ಪ್ರಮಾಣದ ಸುಂದರ ಕೆರೆಯಾಗಿ ರೂಪುಗೊಂಡಿದ್ದು, ಹೆಚ್ಚುವರಿ ನೀರನ್ನು ಸಂಗ್ರಹಿಸುವ ಮೂಲಕ ಜಾನುವಾರುಗಳಿಗೆ ಕುಡಿಯುವ ನೀರು, ಮೀನು ಸಾಕಣೆ, ಪ್ರಾಣಿ–ಪಕ್ಷಿಗಳಿಗೆ ಆಶ್ರಯ ಹಾಗೂ ಕೆರೆಯ ಕೆಳಭಾಗದ ರೈತರ ಕೃಷಿ ಚಟುವಟಿಕೆಗಳಿಗೆ ಸಹಕಾರಿಯಾಗಿದೆ. ವಿಶೇಷವಾಗಿ ಬೇಸಿಗೆ ಸಮಯದಲ್ಲಿಯೂ ಜಾನುವಾರುಗಳಿಗೆ ನೀರು ಲಭ್ಯವಾಗುವುದರ ಜೊತೆಗೆ ರೈತರಿಗೆ ಕೃಷಿ ಚಟುವಟಿಕೆ ನಡೆಸಲು ಅನುಕೂಲವಾಗುತ್ತಿದೆ.

ಈ ಕಾಮಗಾರಿ ಆರಂಭದ ಸಂದರ್ಭದಲ್ಲಿ ಕೆಲವರು ಉದ್ದೇಶಪೂರ್ವಕವಾಗಿ ಅಡ್ಡಿಪಡಿಸಿ, ಕಾಮಗಾರಿಯ ಬಗ್ಗೆ ಅಪಪ್ರಚಾರ ನಡೆಸಿ, ಕಾಮಗಾರಿ ನಿರ್ವಹಿಸಿದವರ ವಿರುದ್ಧ ದೂರುಗಳನ್ನು ಸಲ್ಲಿಸಿದ್ದರು. ಆದ–'ರೆ ಇಂತಹ ಅಡೆತಡೆಗಳಿಗೆ ಮಣಿಯದೆ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿಯು ಮಹತ್ವದ ಯೋಜನೆಯನ್ನು ಉದ್ಯೋಗ ಖಾತ್ರಿ ಯೋಜನೆ ಯಡಿಯಲ್ಲಿ ಕೈಗೆತ್ತಿಕೊಂಡು ಯಶಸ್ವಿಯಾಗಿ ಪೂರ್ಣಗೊಳಿಸಿರುವುದು ಮೆಚ್ಚುಗೆಗೆ ಪಾತ್ರವಾಗಿದೆ.

ಇಂದು ಈ ಅಮೃತ ಸರೋವರವು ನೀರು ಸಂಗ್ರಹಣೆಯ ಜೊತೆಗೆ ಸ್ಥಳೀಯ ಪರಿಸರದ ಸೌಂದರ್ಯವನ್ನು ಹೆಚ್ಚಿಸುವ ಪ್ರೇಕ್ಷಣೀಯ ತಾಣವಾಗಿಯೂ ರೂಪುಗೊಂಡಿದೆ. ಪ್ರವಾಸಿಗರು ಹಾಗೂ ಸ್ಥಳೀಯರು ಒಂದು ದಿನದ ಪ್ರವಾಸಕ್ಕೆ ಭೇಟಿ ನೀಡಿ ಪ್ರಕೃತಿಯ ಸೌಂದರ್ಯವನ್ನು ಸವಿಯಲು ಉತ್ತಮ ವಾತಾವರಣ ಇಲ್ಲಿ ನಿರ್ಮಾಣವಾಗಿದೆ.

ಇದರೊಂದಿಗೆ ಪರಾಪೂರ ಕೆರೆ, ಕೇ–ರಿಲಿಂಗೇಶ್ವರ ದೇವಸ್ಥಾನ, ಮಧ್ಯಭಾಗದಲ್ಲಿರುವ ತಿಮ್ಮಪ್ಪನ ದೇವಸ್ಥಾನ ಹಾಗೂ ಎರಡು ಭಾಗಗಳಲ್ಲಿ ಹರಿದು ಹೋಗುವ ಕೃಷ್ಣಾ ಬಲದಂಡೆ ಕಾಲುವೆಯ ಸುಂದರ ಪರಿಸರವು ನೋಡುಗರ ಮನ ಸೆಳೆಯುತ್ತದೆ. ಈ ಎಲ್ಲ ಸ್ಥಳಗಳು ಒಟ್ಟಾಗಿ ಜಾಲಹಳ್ಳಿ ಭಾಗದ ನೈಸರ್ಗಿಕ ಸೌಂದರ್ಯಕ್ಕೆ ಮತ್ತಷ್ಟು ಮೆರುಗು ನೀಡಿವೆ.

ಗ್ರಾಮದ ಅಭಿವೃದ್ಧಿ ಹಾಗೂ ರೈತರ ಹಿತದೃಷ್ಟಿಯಿಂದ ದೂರದೃಷ್ಟಿಯ ಯೋಜನೆಗಳನ್ನು ಕೈಗೊಂಡರೆ ಅವು ಜನಸಾಮಾನ್ಯರಿಗೆ ಎಷ್ಟು ಉಪಯುಕ್ತವಾಗುತ್ತವೆ ಎಂಬುದಕ್ಕೆ ಈ ಅಮೃತ ಸರೋವರವೇ ಉತ್ತಮ ಉದಾಹರಣೆಯಾಗಿದೆ ಎಂದು ರಾಜ್ಯ ಕಟ್ಟಡ ಕಾರ್ಮಿಕ ಮುಖಂಡರಾದ ಶಬ್ಬೀರ್ ಜಾಲಹಳ್ಳಿ ಹಾಗೂ ಮಹೇಬೂಬ್ ಕುರಕುಂದಿ ಮತ್ತು ಸ್ನೇಹಿತರು ಅಭಿಪ್ರಾಯಪಟ್ಟರು. ವರದಿ ಖಾಜಾ ಹುಸೇನ್ ಬಾಬಾ ಜಾಲಹಳ್ಳಿ

ಅರಕೇರಾ ತಾಲೂಕಿಗೆ ಸೇರ್ಪಡೆಗೊಂಡ ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಳಿಸಲು ಒತ್ತಾಯ

ಫಲಕನಮರಡಿ, ವಂದಲಿ ಸೇರಿದಂತೆ ಆರು ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಸೇರಿಸಿ ಜಾಲಹಳ್ಳಿ ಹೋಬಳಿಯಲ್ಲಿಯೇ ಮುಂದುವರಿಸಲು ಜಿಲ್ಲಾಧಿಕಾರಿಗಳಿಗೆ ಮನವಿ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಅರಕೇರಾ ತಾಲೂಕು ಕೇಂದ್ರಕ್ಕೆ ಸೇರ್ಪಡೆಗೊಳಿಸಿರುವ ಫಲಕನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಂದಲಿ, ಫಲಕನಮರಡಿ, ಮೂಡಲಗುಂಡ, ಮದರಕಲ್, ದೇವರಗುಡ್ಡ ಹಾಗೂ ಊಟಿ ಗ್ರಾಮಗಳನ್ನು ಪುನಃ ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಳಿಸಿ, ಜಾಲಹಳ್ಳಿ ಹೋಬಳಿಯಲ್ಲಿಯೇ ಮುಂದುವರಿಸಬೇಕು ಎಂದು ಒತ್ತಾಯಿಸಿ ಗ್ರಾಮಸ್ಥರು ನವೆಂಬರ್ 6ರಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.



ಕರ್ನಾಟಕ ಸರ್ಕಾರದ ಸಚಿವ ಸಂಪುಟದಲ್ಲಿ ಅರಕೇರಾ ಗ್ರಾಮವನ್ನು ತಾಲೂಕು ಕೇಂದ್ರವನ್ನಾಗಿ ರೂಪಿಸಲು ಅನುಮೋದನೆ ನೀಡಲಾಗಿದೆ. ಆದರೆ ಹೊಸ ತಾಲೂಕುಗಳ ರಚನೆಯ ಸಂದರ್ಭದಲ್ಲಿ ಭೌಗೋಳಿಕ ವಿಸ್ತೀರ್ಣ, ಜನಸಂಖ್ಯೆ, ಆಡಳಿತಾತ್ಮಕ ಅನುಕೂಲತೆ ಹಾಗೂ ಸಾರ್ವಜನಿಕರಿಗೆ ಕಂದಾಯ ಸೇರಿದಂತೆ ವಿವಿಧ ಸರ್ಕಾರಿ ಸೇವೆಗಳು ಸುಲಭವಾಗಿ ದೊರೆಯುವ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ ಎಂದು ಗ್ರಾಮಸ್ಥರು ಮನವಿಯಲ್ಲಿ ತಿಳಿಸಿದ್ದಾರೆ.

ಅರಕೇರಾ ತಾಲೂಕು ಕೇಂದ್ರದಲ್ಲಿ ಅಗತ್ಯ ಮೂಲಸೌಕರ್ಯಗಳು ಹಾಗೂ ತಾಲೂಕು ಕೇಂದ್ರಕ್ಕೆ ಇರಬೇಕಾದ ಆಡಳಿತಾತ್ಮಕ ವ್ಯವಸ್ಥೆಗಳ ಕೊರತೆಯಿದೆ. ಸಮರ್ಪಕವಾಗಿ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸದೆ ಏಕಪಕ್ಷೀಯವಾಗಿ ತಮ್ಮ ಗ್ರಾಮಗಳನ್ನು ಅರಕೇರಾ ತಾಲೂಕಿಗೆ ಸೇರ್ಪಡೆಗೊಳಿಸಿರುವುದು ಜನರಿಗೆ ಅನುಕೂಲವಾಗುವ ಬದಲು ತೊಂದರೆಯಾಗಿ ಪರಿಣಮಿಸಿದೆ ಎಂದು ಆರೋಪಿಸಿದ್ದಾರೆ. ಈ ಗ್ರಾಮಗಳ ನಿವಾಸಿಗಳು ವ್ಯಾಪಾರ–ವಹಿವಾಟು, ಶಾಲಾ–ಕಾಲೇಜು ಶಿಕ್ಷಣ, ಆರೋಗ್ಯ ಸೇವೆ ಹಾಗೂ ಸಾರಿಗೆ ವ್ಯವಸ್ಥೆ ಸೇರಿದಂತೆ ವಿವಿಧ ಅಗತ್ಯಗಳಿಗಾಗಿ ಜಾಲಹಳ್ಳಿಯನ್ನೇ ಅವಲಂಬಿಸಿದ್ದಾರೆ. ಜಾಲಹಳ್ಳಿಯಿಂದ ವಿವಿಧ ಪ್ರದೇಶಗಳಿಗೆ ಉತ್ತಮ ಸಾರಿಗೆ ಸಂಪರ್ಕವಿರುವುದರಿಂದ ಈ ಗ್ರಾಮಗಳನ್ನು ದೇವದುರ್ಗ ತಾಲೂಕು ಹಾಗೂ ಜಾಲಹಳ್ಳಿ ಹೋಬಳಿಯಲ್ಲಿಯೇ ಮುಂದುವ–ರಿಸುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಸೂಕ್ತವಾಗಿದೆ ಎಂದು ಮನವಿಯಲ್ಲಿ ವಿವರಿಸಿದ್ದಾರೆ.

ಈ ಕುರಿತು ಈ ಹಿಂದೆಯೂ ಜಿಲ್ಲಾಧಿಕಾರಿಗಳ ಕಚೇರಿಗೆ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಸುಮಾರು ಒಂದು ವರ್ಷದ ಹಿಂದೆ ಅಂದಿನ ಜಿಲ್ಲಾಧಿಕಾರಿಗಳು ಅರಕೇರಾ ತಹಸೀಲ್ದಾರ–ರಿಗೆ ಲಿಖಿತ ಆದೇಶ ನೀಡಿ, ಸಂಬಂಧಪಟ್ಟ ಗ್ರಾಮಗಳ ನಿವಾಸಿಗಳ ಅಭಿಪ್ರಾಯ ಸಂಗ್ರಹಿಸಿ ವರದಿ ಸಲ್ಲಿಸುವಂತೆ ಸೂಚಿಸಿದ್ದರು. ಆದ–'ರೆ ಈವರೆಗೆ ಯಾವುದೇ ಸ್ಪಷ್ಟ ಕ್ರಮ ಕೈಗೊಂಡಿಲ್ಲ ಎಂದು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಜಿಲ್ಲಾಧಿಕಾರಿಗಳು ಕೂಡಲೇ ಸಂಬಂಧಪಟ್ಟ ಗ್ರಾಮಗಳ ನಿವಾಸಿಗಳಿಂದ ಪಾರದರ್ಶಕವಾಗಿ ಜನಾಭಿಪ್ರಾಯ ಸಂಗ್ರಹಿಸಲು ಆದೇಶಿಸಬೇಕು. ಜನರ ಅಭಿಪ್ರಾಯಕ್ಕೆ ಅನುಗುಣವಾಗಿ ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಳಿಸಿ, ಜಾಲಹಳ್ಳಿ ಹೋಬಳಿಯಲ್ಲಿಯೇ ಮುಂದುವರಿಸಲು ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಒಂದು ವೇಳೆ ಅಧಿಕಾರಿಗಳು ಮನವಿಗೆ ಸ್ಪಂದಿಸದೆ ನಿರ್ಲಕ್ಷ್ಯ ವಹಿಸಿದರೆ ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಹೋರಾಟ ರೂಪಿಸಲಾಗುವುದು ಎಂದು ಗ್ರಾಮಸ್ಥರು ಎಚ್ಚ–ರಿಕೆ ನೀಡಿದ್ದಾರೆ.ಈ ಸಂದರ್ಭದಲ್ಲಿ ಫಲಕನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುಖಂಡರಾದ ಸಿದ್ದನಗೌಡ, ಮೂಡಲಗುಂಡದ ಹನುಮಗೌಡ, ಮದರಕಲ್‌ನ ರಂಗಣ್ಣ ಕೊಲ್ಕರ್, ಶಿವರಾಜ್ ಮುಂಡರಗಿ, ಹುಸೇನ್ ಸಾಬ್ ಗಣಜಲಿ, ಮಲ್ಲಯ್ಯ ಕಟ್ಟಿಮನಿ ಸೇರಿದಂತೆ ಫಲಕನಮರಡಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಮುಖಂಡರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

ನೇಮಕಾತಿ ಪ್ರಕಟಣೆ

ಇಂಡಿಯನ್ ಬ್ಯಾಂಕ್ ನೇಮಕಾತಿ 2026 – 1500 ಅಪ್ರೆಂಟಿಸ್ (Apprentice) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ.

ಇಂಡಿಯನ್ ಬ್ಯಾಂಕ್ ನೇಮಕಾತಿ 2026: 1500 ಅಪ್ರೆಂಟಿಸ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಇಂಡಿಯನ್ ಬ್ಯಾಂಕ್ ತನ್ನ ನವೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ, ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅಪ್ರೆಂಟಿಸ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಕೋರಿದೆ. ಅಖಿಲ ಭಾರತ ಮಟ್ಟದಲ್ಲಿ ಸರ್ಕಾರಿ ವಲಯದಲ್ಲಿ ವೃತ್ತಿಜೀವನವನ್ನು ರೂಪಿಸಿಕೊಳ್ಳಲು ಬಯಸುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 25–ನವೆಂಬರ್–2026 ರಂದು ಅಥವಾ ಅದಕ್ಕೂ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಸಂಸ್ಥೆಯ ಹೆಸರು: ಇಂಡಿಯನ್ ಬ್ಯಾಂಕ್ (Indian Bank) ಹುದ್ದೆಗಳ ಸಂಖ್ಯೆ: 1500 ಉದ್ಯೋಗ ಸ್ಥಳ: ಅಖಿಲ ಭಾರತ (ಭಾರತದಾದ್ಯಂತ) ಹುದ್ದೆಯ ಹೆಸರು: ಅಪ್ರೆಂಟಿಸ್ (Apprentice) ವೇತನ: ತಿಂಗಳಿಗೆ ರೂ. 12,300 – 15,000/– ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25–ನವೆಂಬರ್–2026. ಅಧಿಕೃತ ವೆಬ್‌ಸೈಟ್: indianbank.in.

ಕನ್ನಡ ರಾಜ್ಯೋತ್ಸವದಂದು ಕಪ್ಪು ದಿನಾಚರಣೆ: ದಿನೇಶ ಮುದಾಳೆ ವಿರುದ್ಧ ಕ್ರಮಕ್ಕೆ ಕರವೇ ಆಗ್ರಹ

ನೈಜ್ಯ ದೆಸೆ ನ್ಯೂಸ್

ಬೀದರ್: ಕನ್ನಡ ರಾಜ್ಯೋತ್ಸವದಂದು ಕಪ್ಪು ದಿನಾಚರಣೆ ಆಚರಿಸಿ, ಭಾಲ್ಕಿ ಮತ್ತು ಬೀದರ್ ಜಿಲ್ಲೆಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಒತ್ತಾಯಿಸಿರುವ ಭಾಲ್ಕಿಯ ಯುವಕ ದಿನೇಶ ಮುದಾಳೆ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ) ಜಿಲ್ಲಾ ಸಮಿತಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಆಗ್ರಹಿಸಿದೆ.



ನವೆಂಬರ್ 1ರಂದು ರಾಜ್ಯಾದ್ಯಂತ ಕನ್ನಡಿಗರು ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸುತ್ತಿದ್ದ ಸಂದರ್ಭದಲ್ಲಿ, ಭಾಲ್ಕಿ ಪಟ್ಟಣದ ನಿವಾಸಿ ಹಾಗೂ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯನೆಂದು ಹೇಳಲಾದ ದಿನೇಶ ಮುದಾಳೆ ಎಂಬ ಯುವಕ ಕಪ್ಪು ದಿನಾಚರಣೆ ಆಚರಿಸಿ, ಭಾಲ್ಕಿ ಮತ್ತು ಬೀದರ್ಗಳನ್ನು ಮಹಾರಾಷ್ಟ್ರ ರಾಜ್ಯಕ್ಕೆ ಸೇರಿಸಬೇಕೆಂದು ಒತ್ತಾಯಿಸಿರುವುದು ಕನ್ನಡಿಗರ ಭಾವನೆಗಳಿಗೆ ನೋವುಂಟು ಮಾಡಿದೆ ಎಂದು ಕರವೇ ಮುಖಂಡರು ಮನವಿಯಲ್ಲಿ ತಿಳಿಸಿದ್ದಾರೆ. ಕ್ಯಾಲೆಂಡರ್ನೋಡಿ ಕನ್ನಡ ರಾಜ್ಯೋತ್ಸವದಂತಹ ನಾಡಿನ ಹೆಮ್ಮೆಯ ದಿನದಂದು ಇಂತಹ ಚಟುವಟಿಕೆಗಳು ನಡೆದಿರುವುದನ್ನು ಗಂಭೀರವಾಗಿ ಪರಿಗಣಿಸಬೇಕು. ಈ ಘಟನೆಯ ಕುರಿತು ಸೂಕ್ತ ತನಿಖೆ ನಡೆಸಿ, ಸಂಬಂಧಪಟ್ಟ ವ್ಯಕ್ತಿಯ ವಿರುದ್ಧ ಕಾನೂನು ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ) ಜಿಲ್ಲಾಧ್ಯಕ್ಷ ಪೀಟರ್ ಚಿಟಗುಪ್ಪಾ, ಜಿಲ್ಲಾ ಕಾರ್ಯದರ್ಶಿ ಮೋಜೆಸ್ ಅಣದೂರ, ಜಿಲ್ಲಾ ಸಹ ಕಾರ್ಯದರ್ಶಿ ಅಶೋಕ್ ಕಡ್ಯಾಳ್, ಜಿಲ್ಲಾ ಮುಖಂಡ ಸಾಗರ್ ಕಡ್ಯಾಳ, ಬೀದರ್ ದಕ್ಷಿಣ ಕ್ಷೇತ್ರದ ತಾಲೂಕು ಅಧ್ಯಕ್ಷ ನಿಲೇಶ ರಾಠೋಡ್, ತಾಲೂಕು ಕಾರ್ಯದರ್ಶಿ ಶಿವಕುಮಾರ್ ಮಾಮೂಡಗಿ, ತಾಲೂಕು ಸಹ ಕಾರ್ಯದರ್ಶಿ ರಾಜಗೊಂಡ ಅಣದೂರ, ರಾಹುಲ್ ಜಾದವ್, ಅರವಿಂದ್, ಅಜಯ್ ಸೇ–ರಿದಂತೆ ಅನೇಕ ಕರವೇ ಕಾರ್ಯಕರ್ತರು ಉಪಸ್ಥಿತರಿದ್ದರು.

ಯುಪಿಎಸ್‌ಸಿ ಪರೀಕ್ಷೆಯಲ್ಲಿ 224ನೇ ರ್‍ಯಾಂಕ್ ಪಡೆದ ರಾಹುಲ್ ಜಯವಂತ್ ಪಾಟೀಲ್ ಅವರಿಗೆ ಸಚಿವ ಸತೀಶ್ ಜಾರಕಿಹೊಳಿ ಅವರಿಂದ ಸನ್ಮಾನ

ನೈಜ್ಯ ದೆಸೆ ನ್ಯೂಸ್

ಬೆಳಗಾವಿ: ಜಿಲ್ಲೆಯ ಯಮಕನಮರಡಿ ವಿಧಾನಸಭಾ ಕ್ಷೇತ್ರದ ಕಳಖಾಂಬ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಿವಾಸಿ ರಾಹುಲ್ ಜಯವಂತ್ ಪಾಟೀಲ್ ಅವರು UPSC-CSE 2025 ಪರೀಕ್ಷೆಯಲ್ಲಿ 224ನೇ ರ್‍ಯಾಂಕ್ ಪಡೆದು ಜಿಲ್ಲೆಗೆ ಹಾಗೂ ಕ್ಷೇತ್ರಕ್ಕೆ ಕೀರ್ತಿ ತಂದಿದ್ದಾರೆ. ಇದಕ್ಕೂ ಮೊದಲು UPSC-2024ರ ಮೂಲಕ ಭಾರತೀಯ ಅರಣ್ಯ ಸೇವೆ (IFoS) ತರಬೇತಿಯಲ್ಲಿರುವ ರಾಹುಲ್ ಅವರ ಸಾಧನೆ ನಿಜಕ್ಕೂ ಹೆಮ್ಮೆಯ ಸಂಗತಿಯಾಗಿದೆ.



ಬೆಂಗಳೂ–ರಿನ ಆರ್.ವಿ. ಕಾಲೇಜ್ ಆಫ್ ಎಂಜಿನಿಯ–ರಿಂಗ್‌ನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ, ಬೆಳಗಾವಿಯ ಆರ್.ಎಲ್.ಎಸ್. ಕಾಲೇಜಿನಲ್ಲಿ ಪಿಯುಸಿ ಹಾಗೂ ವನಿತಾ ವಿದ್ಯಾಲಯದಲ್ಲಿ ಶಾಲಾ ಶಿಕ್ಷಣ ಪಡೆದಿರುವ ರಾಹುಲ್ ಅವರು ತಮ್ಮ ಪರಿಶ್ರಮ ಮತ್ತು ಸಾಧನೆಯ ಮೂಲಕ ಯುವಜನತೆಗೆ ಮಾದರಿಯಾಗಿದ್ದಾರೆ. ರಾಹುಲ್ ಪಾಟೀಲ್ ಅವರನ್ನು ಆತ್ಮೀಯವಾಗಿ ಅಭಿನಂದಿಸಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು, ಅವರ ಮುಂದಿನ ವೃತ್ತಿಜೀವನದಲ್ಲಿ ಇನ್ನಷ್ಟು ಉನ್ನತ ಸಾಧನೆಗಳು ಲಭಿಸಲಿ, ದೇಶದ ಆಡಳಿತ ಸೇವೆಯಲ್ಲಿ ಜನಪರವಾಗಿ ಕಾರ್ಯನಿರ್ವಹಿಸುವ ಅವಕಾಶ ದೊರೆಯಲಿ ಎಂದು ಹಾರೈಸಿದರು.

ರಾಜ್ಯಮಟ್ಟದಲ್ಲಿ ಮಿಂಚಿದ ಮಟ್ಟೂರು ಯುವ ಕಬಡ್ಡಿ ಪ್ರತಿಭೆ ಬೀರ್ಲಿಂಗ್

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಗ್ರಾಮೀಣ ಮಣ್ಣಿನಲ್ಲಿ ಅರಳಿದ ಪ್ರತಿಭೆಯೊಂದು ಇಂದು ರಾಜ್ಯಮಟ್ಟದಲ್ಲಿ ಗುರುತಿಸಿಕೊಳ್ಳುವ ಮೂಲಕ ತನ್ನೂರಿನ ಕೀರ್ತಿಯನ್ನು ಹೆಚ್ಚಿಸಿದೆ.ಮಟ್ಟೂರು ಗ್ರಾಮದ ಮಾನಯ್ಯ ಅವರ ಪುತ್ರ,ಪ್ರಸ್ತುತ ಪಿಯು ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಯುವ ಕಬಡ್ಡಿ ಆಟಗಾರ ಬೀರ್ಲಿಂಗ್ ಅವರು ತಮ್ಮ ಕಠಿಣ ಪರಿಶ್ರಮ,ನಿರಂತರ ಅಭ್ಯಾಸ ಹಾಗೂ ಕ್ರೀಡಾ ಬದ್ಧತೆಯಿಂದ ರಾಜ್ಯಮಟ್ಟದ ಕ್ರೀಡಾಪಟುವಾಗಿ ಹೊರಹೊಮ್ಮಿದ್ದಾರೆ.



ಬಾಲ್ಯದಿಂದಲೇ ಕಬಡ್ಡಿ ಆಟದ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದ ಬೀರ್ಲಿಂಗ್,ಮೈದಾನವನ್ನೇ ತಮ್ಮ ಸಾಧನೆಯ ವೇದಿಕೆಯನ್ನಾಗಿಸಿಕೊಂಡಿದ್ದಾರೆ. ಗೆಲುವಿನ ಕನಸು ಹೊತ್ತು ಪ್ರತಿದಿನ ಅಭ್ಯಾಸದಲ್ಲಿ ತೊಡಗಿಸಿಕೊಂಡು,ಸೋಲನ್ನು ಸವಾಲಾಗಿ ಸ್ವೀಕರಿಸಿ ಮುನ್ನಡೆಯುತ್ತಿರುವ ಅವರು ಶಾಲಾ ಹಾಗೂ ಕಾಲೇಜು ಮಟ್ಟದ ವಿವಿಧ ಕ್ರೀಡಾಕೂಟಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಇದೀಗ ರಾಜ್ಯಮಟ್ಟದ ಕಬಡ್ಡಿ ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ಗ್ರಾಮೀಣ ಪ್ರತಿಭೆಯ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ಪ್ರತಿಭೆಗಳು ಸೂಕ್ತ ಅವಕಾಶ,ತರಬೇತಿ ಹಾಗೂ ಪ್ರೋತ್ಸಾಹದ ಕೊರತೆಯಿಂದ ಬೆಳಕಿಗೆ ಬರದೆ ಉಳಿಯುತ್ತವೆ.ಅಂತಹ ಪರಿಸ್ಥಿತಿಯಲ್ಲಿಯೂ ತಮ್ಮ ಪರಿಶ್ರಮದಿಂದ ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡಿರುವ ಬೀರ್ಲಿಂಗ್ ಅವರ ಸಾಧನೆ ಇತರ ಯುವಕರಿಗೆ ಸ್ಫೂರ್ತಿಯಾಗಿದೆ. ಇಂತಹ ಪ್ರತಿಭೆಗಳಿಗೆ ಸರ್ಕಾರ,ಕ್ರೀಡಾ ಇಲಾಖೆ ಹಾಗೂ ದಾನಿಗಳು ಸೂಕ್ತ ಪ್ರೋತ್ಸಾಹ ನೀಡಿದರೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಇನ್ನಷ್ಟು ಎತ್ತರದ ಸಾಧನೆ ಮಾಡಲು ಸಾಧ್ಯವಾಗಲಿ.

ಒತ್ತಡ ಮುಕ್ತ ಕಲಿಕೆಗೆ ಆನಂದದಾಯಕ ಹಬ್ಬ: ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಿದ ಪ್ರತಿಭೆ ಕಾರಂಜಿ’



ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ‘ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗಾಗಿಯೇ ಸರ್ಕಾರ ಹಮ್ಮಿಕೊಂಡಿರುವ ‘ಕಲಿಕಾ ಹಬ್ಬ’ವು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸಲು ಮತ್ತು ಆನಂದದಾಯಕವಾಗಿ ಕಲಿಯಲು ಅತ್ಯಂತ ಪೂರಕವಾಗಿದೆ’ ಎಂದು ಎಸ್‌ಡಿ–ಎಂಸಿ ಅಧ್ಯಕ್ಷ ರಾಮಲಿಂಗಪ್ಪ ತಿಳಿಸಿದರು. ಪಟ್ಟಣದ 21ನೇ ವಾರ್ಡ್‌ನ ಸಕ್ಕರೆ ಕಾರ್ಖಾನೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿದ್ದ ‘ಪ್ರತಿಭೆ ಕಾರಂಜಿ’ ಹಾಗೂ ‘ಕಲಿಕಾ ಹಬ್ಬ’ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂತಹ ಸೃಜನಶೀಲ ವಾತಾವರಣವು ಮಕ್ಕಳ ಕಲಿಕಾ ಸಾಮರ್ಥ–’ ್ಯವನ್ನು ಹೆಚ್ಚಿಸುತ್ತದೆ ಎಂದರು. ಆಟೋಟದ ಮೂಲಕ ಶೈಕ್ಷಣಿಕ ಪ್ರಗತಿ: ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನಾಡಿದ ಸಿಆರ್‌ಪಿ ಕರುಣಾಕರ ಆಚಾರ್ ಅವರು, "ಕಲಿಕಾ ಬೋಧನೆಯ ಜೊತೆಗೆ ಆಟೋಟ ಹಾಗೂ ವೈವಿಧ್ಯಮಯ ಚಟುವಟಿಕೆಗಳ ಮೂಲಕ ಮಕ್ಕಳ ಶೈಕ್ಷಣಿಕ ಮಟ್ಟವನ್ನು ಸುಧಾ–ರಿಸಲು ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಈ ಹಬ್ಬವು ಮಕ್ಕಳಿಗೆ ಯಾವುದೇ ಹೊರೆ ಅಥ–’ವಾ ಒತ್ತಡವನ್ನು ಉಂಟುಮಾಡುವುದಿಲ್ಲ. ಬದಲಿಗೆ ಆನಂದದಾಯಕ ಚಟುವಟಿಕೆಗಳ ಮೂಲಕ ಮಕ್ಕಳಿಂದ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ" ಎಂದು ವಿವರಿಸಿದರು. ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹನುಮಂತಪ್ಪ ಮಾತನಾಡಿ, ಮಕ್ಕಳ ಸರ್ವತೋಮುಖ ಬೆಳವಣಿಗೆ ಹಾಗೂ ಶಿಕ್ಷಣದ ಮೇಲಿನ ಆಸಕ್ತಿಯನ್ನು ಹೆಚ್ಚಿಸಲು ಇಂತಹ ಹಬ್ಬಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳು ಸಿದ್ಧಪಡಿಸಿದ್ದ ವಿವಿಧ ಕಲಿಕೋತ್ಸವ ಪ್ರದರ್ಶನಗಳನ್ನು ಗಣ್ಯರು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ಮಕ್ಕಳಿಂದ ಆಕರ್ಷಕ ಸಾಂಸ್ಕೃತಿ–ಕ ಕಾರ್ಯಕ್ರಮಗಳು ಜರುಗಿದವು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪತ್ರ ಹಾಗೂ ಬಹುಮಾನಗಳನ್ನು ವಿತರಿಸಲಾಯಿತು. ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ದೊಡ್ಡಬಸಪ್ಪ, ಎಸ್‌ಡಿಎಂಸಿ ಉಪಾಧ್ಯಕ್ಷ ನಾಗರಾಜ, ಈಸಿಟಿ ರೇವಣ್ಣ, ಸಿಆರ್‌ಪಿಗಳಾದ ರೇಣುಕಾರಾಧ್ಯ, ಭೂಮೇಶ್, ಪ್ರಭಾಕರ್, ಮುಖಂಡರಾದ ಚಂದ್ರಶೇಖರ್, ಆದಿನಾರಾಯಣ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸೇ–ರಿದಂತೆ ಇತರರು ಉಪಸ್ಥಿತರಿದ್ದರು.

ವರದಿ: ಜಿಲಾನಸಾಬ್ ಬಡಿಗೇರ್

ಎಮ್ಮೆರಾಯನಿಗೆ ಆರತಿ, ಗೌರಮ್ಮನಿಗೆ ಹರಕೆ; ಮುದ್ದಾಪುರದಲ್ಲಿ ದೀಪಾವಳಿ ಹಬ್ಬದ ಸಡಗರದ ಸಡಲಿಕೆ ಇಲ್ಲದ ಹಳ್ಳಿ ಸೊಬಗು

ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ಕಾಲ ಬದಲಾದ್ರೂ ನಮ್ಮ ಹಳೇ ಕಾಲದ ನಂಬಿಕೆ, ನಡಾವಳಿಗಳು ಮಾತ್ರ ಮಾಸಿಲ್ಲ ಅನ್ನೋದಕ್ಕೆ ಕಂಪ್ಲಿ ಸೀಮೆಯ ದೀಪಾವಳಿ ಹಬ್ಬದ ಈ ಸಂಭ್ರಮವೇ ಸಾಕ್ಷಿ. ಬೆಳಕಿನ ಹಬ್ಬದ ಸಡಗರದ ನಡುವೆಯೇ, ಇಲ್ಲಿನ ಹಳ್ಳಿಗಾಡಿನ ಮಣ್ಣಿನ ವಾಸನೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಎತ್ತಿಹಿಡಿಯುವ ಅಪರೂಪದ ಆಚರಣೆಗಳು ಇಂದಿಗೂ ಜೀವಂತವಾಗಿವೆ. ತಾಲ್ಲೂಕಿನ ನಂ. 10 ಮುದ್ದಾಪುರ ಗ್ರಾಮದಲ್ಲಿ ಬಲಿಪಾಡ್ಯಮಿಯ ದಿನದಂದು ಕಂಡುಬಂದ ಹಳ್ಳಿ ಸೊಬಗಿನ ವಿಶೇಷ ವರದಿ ಇಲ್ಲಿದೆ.

ಎಮ್ಮೆರಾಯನಿಗೆ ಸಿಂಗಾರ,ಭಕ್ತಿಗೌರವ ಹೈನುಗಾರಿಕೆಯನ್ನೇ ನಂಬಿ ಬದುಕುವ ಇಲ್ಲಿನ ಗೌಳಿ ಸಮುದಾಯದ ಜನರಿಗೆ ದೀಪಾವಳಿ ಬಂತೆಂದರೆ ಎಲ್ಲಿಲ್ಲದ ಸಂಭ್ರಮ. ಬಲಿಪಾಡ್ಯಮಿಯ ದಿನದಂದು ತಮಗೇ ಅನ್ನ ನೀಡುವ ಕರಾವಳಿ–ಎಮ್ಮೆಗಳನ್ನು ದೇವರೆಂದೇ ಭಾವಿಸಿ ಪೂಜಿಸುವುದು ಇವರ ತಲೆತಲಾಂತರದ ರೂಢಿ. ಗ್ರಾಮದ ಸುಮಾರು



70 ಗೌಳಿ ಕುಟುಂಬಗಳು ಸಾಕಿರುವ 200ಕ್ಕೂ ಹೆಚ್ಚು ಎಮ್ಮೆಗಳಿಗೆ ಅಂದು ಮೈತೊಳೆದು, ಕೊಂಬುಗಳಿಗೆ ಬಣ್ಣ ಹಚ್ಚಿ, ಹೂವಿನ ಹಾರ ಹಾಕಿ ಸಕಲ ಸಡಗರದಿಂದ ಶೃಂಗರಿಸಲಾಗುತ್ತದೆ.

ಮನೆ ಅಂಗಳದಲ್ಲಿ ಪಾಂಡವರ ಪ್ರತೀಕವಾಗಿ ಇಡುವ ಮೂರ್ತಿಗಳ ಮುಂದೆ ಈ ಎಮ್ಮೆಗಳು ಮೊಣಕಾಲೂರಿ ನಮಸ್ಕ–ರಿಸುವ ದೃಶ್ಯ ನೋಡುಗರ ಕಣ್ಣಿಗೆ ಹಬ್ಬ.

ಈ ಭಕ್ತಿ ಸಮರ್ಪಣೆಯ ನಂತರ, ಬಸವೇಶ್ವರ ದೇವಸ್ಥಾನದಿಂದ ಮಾರೆಪ್ಪ ದೇವಸ್ಥಾನದವರೆಗೆ ಇಡೀ ಊರೇ ಸೇರಿ ಎಮ್ಮೆಗಳ ಭವ್ಯ ಮೆರವಣಿಗೆ ನಡೆಸಿ ಹಬ್ಬದ ಕಳೆಯನ್ನು ಹೆಚ್ಚಿಸುತ್ತಾರೆ.

ಇದೇ ವೇಳೆ ಗೌಳಿ ಸಮುದಾಯದ ಹೆಣ್ಣುಮಕ್ಕಳು ತಮ್ಮ ಸಂಸಾರದ ಒಳಿತಿಗಾಗಿ, ಪತಿ–ಮಕ್ಕಳ ಆಯುಷ್ಯ ಆರೋಗ್ಯಕ್ಕಾಗಿ ಗೌರಮ್ಮನ ವ್ರತವನ್ನು ಅತ್ಯಂತ ನಿಷ್ಠೆಯಿಂದ ಆಚರಿಸುತ್ತಾರೆ. ಹರಕೆ ಹೊತ್ತ ಮುತ್ತೈದೆಯರು ಭಕ್ತಿಭಾವದಿಂದ ಪೂಜೆ ಸಲ್ಲಿಸಿ, ಹಳ್ಳಿಯ ಸೌಭಾಗ್ಯದ ಸಂಕೇತವಾಗಿ ಈ ಆಚ–’ರಣೆಯನ್ನು ಇಂದಿಗೂ ಹಸಿರಾಗಿಟ್ಟಿದ್ದಾರೆ. ನಾಗರಿಕತೆಯ ಅಬ್ಬರದಲ್ಲಿ ಗ್ರಾಮೀಣ ಸೊಗಡಿನ ಇಂತಹ ಆಚರಣೆಗಳು ಮರೆಯಾಗುತ್ತಿರುವ ಈ ದಿನಗಳಲ್ಲಿ, ಮುದ್ದಾಪುರದ ಗೌಳಿ ಸಮುದಾಯದವರು ತಮ್ಮ ಸಾಂಪ್ರದಾಯಿಕ ಮೆರುಗನ್ನು ಉಳಿಸಿಕೊಂಡು ಬಂದಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ.

ವರದಿ: ಜಿಲಾನಸಾಬ್ ಬಡಿಗೇರ್

ಕಂಪ್ಲಿ ವರ್ತಕರ ಅಂಗಡಿಗಳಿಗೆ ಶಾಸಕ ಜೆ.ಎನ್. ಗಣೇಶ್, ಹೊಸಕೋಟೆ ಜಗದೀಶ್ ಭೇಟಿ: ಲಕ್ಷ್ಮೀ ದೇವಿಗೆ ವಿಶೇಷ ನಮನ



ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ಇಲ್ಲಿನ ಮಾರುಕಟ್ಟೆ ಪ್ರದೇಶದ ವಿವಿಧ ವರ್ತಕರ ಅಂಗಡಿ ಮುಂಗಟ್ಟುಗಳಿಗೆ ಕಂಪ್ಲಿ ಕ್ಷೇತ್ರದ ಶಾಸಕರಾದ ಜೆ.ಎನ್. ಗಣೇಶ್ ಹಾಗೂ ಬಳ್ಳಾರಿ ಜಿಲ್ಲಾ ವೀರಶೈವ ಮಹಾಸಭಾದ ಅಧ್ಯಕ್ಷರಾದ ಹೊಸಕೋಟೆ ಜಗದೀಶ್ ಅವರುಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು. ಪಟ್ಟಣದ ಪ್ರಮೋದ್ ಭಟಾರಿ ಫೋಟೋ ಸ್ಟುಡಿಯೋ ಸೇರಿದಂತೆ ಸಾಲು ಸಾಲಾಗಿ ಇತರೆ ಎಲ್ಲಾ ಪ್ರಮುಖ ವ್ಯಾಪಾರ ಮಳಿಗೆಗಳಿಗೆ ಇಬ್ಬರು ನಾಯಕರು ಭೇಟಿ ನೀಡಿದರು.

ಪ್ರತಿ ಅಂಗಡಿಯಲ್ಲೂ ಪ್ರತಿಷ್ಠಾಪಿಸಲಾಗಿದ್ದ ಜಗನ್ಮಾತೆ ಲಕ್ಷ್ಮೀ ದೇವಿಯ ಭವ್ಯ ಮೂರ್ತಿ ಹಾಗೂ ಭಾವಚಿತ್ರಗಳಿಗೆ ಶ್ರದ್ಧಾಭಕ್ತಿಯಿಂದ ನಮಸ್ಕರಿಸಿ, ಪುಷ್ಪಾರ್ಚನೆ ಮಾಡಿದರು. ಶಾಸಕ ಜೆ.ಎನ್. ಗಣೇಶ್ ಮಾತನಾಡಿ, "ಕಂಪ್ಲಿ ಪಟ್ಟಣದ ಆರ್ಥಿಕ ಪ್ರಗತಿಯಲ್ಲಿ ಸ್ಥಳೀಯ ವರ್ತಕರ ಪಾತ್ರ ದೊಡ್ಡದಾಗಿದೆ. ಹಬ್ಬ ಹರಿದಿನಗಳ ಸಂದರ್ಭದಲ್ಲಿ ವ್ಯಾಪಾರಿಗಳು ಶ್ರದ್ಧೆಯಿಂದ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಸಂತಸ ತಂದಿದೆ. ತಾಯಿ ಲಕ್ಷ್ಮೀದೇವಿ ಎಲ್ಲ ವರ್ತಕರಿಗೂ, ಸಾರ್ವಜನಿಕ–ರಿಗೂ ಆಯುಷ್ಯ, ಆರೋಗ್ಯ ಹಾಗೂ ಸುಖ–ಸಮೃದ್ಧಿ ನೀಡಲಿ," ಎಂದು ಆಶಿಸಿದರು.

ಬಳ್ಳಾರಿ ಜಿಲ್ಲಾ ವೀರಶೈವ ಮಹಾಸಭಾದ ಅಧ್ಯಕ್ಷರಾದ ಹೊಸಕೋಟೆ ಜಗದೀಶ್ ಮಾತನಾಡಿ, "ನಮ್ಮ ಸಂಸ್ಕೃತಿ ಮತ್ತು ಧಾರ್ಮಿಕ ಆಚರಣೆಗಳು ಸಮಾಜದಲ್ಲಿ ಒಗ್ಗಟ್ಟನ್ನು ಮೂಡಿಸುತ್ತವೆ. ವರ್ತಕ ಮಹಾಶಯರು ಒಟ್ಟಾಗಿ ಇಂತಹ ವಿಶೇಷ ಪೂಜೆಗಳನ್ನು ಆಯೋಜಿಸುವ ಮೂಲಕ ಸೌಹಾರ್ದತೆ ಮೆರೆಯುತ್ತಿದ್ದಾರೆ. ಎಲ್ಲರ ವ್ಯಾಪಾರ–ವ್ಯವಹಾರಗಳು ಉತ್ತಮವಾಗಿ ನಡೆದು, ಸಮೃದ್ಧಿ ಕಾಣಲಿ," ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ವರ್ತಕ ಸಂಘದ ಪ್ರಮುಖ ಮುಖಂಡರಾದ ರಾಜಾರಾವ್, ಯುಗಾದಿ ಶಿವರಾಜ್, ಮತ್ತು ಡಿ. ಮೌನೇಶ್, ನಾಗರಾಜ್, ಹಂಪಾರೆಡ್ಡಿ, ಪ್ರಮೋದ್ ಸೇ–ರಿದಂತೆ ಇತರ ಪ್ರಮುಖ ಪದಾಧಿಕಾರಿಗಳು ಹಾಗೂ ಸ್ಥಳೀಯ ವರ್ತಕರು ಉಪಸ್ಥಿತರಿದ್ದು, ಇಬ್ಬರೂ ಗಣ್ಯರನ್ನು ಗೌರವಪೂರ್ವಕವಾಗಿ ಬರಮಾಡಿಕೊಂಡು ಸನ್ಮಾನಿಸಿದರು.

ವರದಿ: ಜಿಲಾನಸಾಬ್ ಬಡಿಗೇರ್

ಗೃಹ ಸಚಿವ ಪ್ರಿಯಾಂಕ್ ಖರ್ಗೆ ಕಾರ್ಯವೈಖರಿಗೆ ಪಕ್ಷದಲ್ಲೇ ಭುಗಿಲೆದ್ದ ಅಸಮಾಧಾನ

ನೈಜ್ಯ ದೆಸೆ ನ್ಯೂಸ್



ಬೆಂಗಳೂರು: ಹಲವಾರು ಪ್ರಮುಖ ಘಟನೆಗಳಲ್ಲಿ ಗೃಹ ಸಚಿವಾಲಯದ ಕಾರ್ಯವೈಖರಿ ಕುರಿತು ಕಾಂಗ್ರೆಸ್ ಪಕ್ಷದಲ್ಲೇ ತೀವ್ರ ಅಸಮಾಧಾನಗಳು ಕೇಳಿ ಬರುತ್ತಿವೆ. ಮಾಧ್ಯಮಗಳ ಮುಂದೆ ಆರ್‌ಎಸ್‌ಎಸ್ ವಿರುದ್ಧ ಅಬ್ಬರಿಸಿದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು, ಇಲಾಖೆಯ ಕಾರ್ಯನಿರ್ವಹಣೆ ವಿಚಾರ ಬಂದಾಗ ಕಾನೂನುಗಳ ನೆಪದಲ್ಲಿ ಮೃದು ಹಿಂದುತ್ವ ಅನುಸರಿಸುತ್ತಿದ್ದಾರೆ ಎಂಬ ಆರೋಪಗಳನ್ನು ಪಕ್ಷದ ಹಿರಿಯ ನಾಯಕರೇ ಮಾಡುತ್ತಿದ್ದಾರೆ.ನಕ್ಷೆಗಳನ್ನು ನೋಡಿ

ವಿಧಾನಸಭೆ ಚುನಾವಣೆಗೂ ಮುನ್ನ ಕಾಂಗ್ರೆಸ್ ಪಕ್ಷ ಹಲವಾರು ಭರವಸೆಗಳನ್ನು ನೀಡಿತ್ತು. ಅವುಗಳಲ್ಲಿ ಬಹುತೇಕ ಈಡೇರಿಸಲಾಗಿಲ್ಲ. ಮತಾಂತರ ನಿಷೇದ ಕಾಯ್ದೆ, ಗೋ ಹತ್ಯೆ ನಿಯಂತ್ರಣ ಕಾಯ್ದೆಗಳನ್ನು ಹಿಂಪಡೆಯುವುದಾಗಿ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳನ್ನು ಸರ್ಕಾರ ಮರೆತಿದೆ ಎಂಬ ಟೀಕೆಗಳಿವೆ. 2023ರಲ್ಲಿ ಕಾಂಗ್ರೆಸ್ ಪಕ್ಷ 136 ಸ್ಥಾನಗಳಿಸಲು ಅಲ್ಪ ಸಂಖ್ಯಾತರ ಬೆಂಬಲ ಬಹುಮುಖ್ಯವಾಗಿ–ತ್ತು. ಪ್ರಣಾಳಿಕೆಯಲ್ಲಿ ಭರವಸೆಗಳ ಮೂಲಕ ಅವರಲ್ಲಿ ವಿಶ್ವಾಸ ಮೂಡಿಸಲಾಗಿತ್ತು. ಆದರೆ ಸರ್ಕಾರ ರಚನೆಯಾದ ಬಳಿಕ ಬಿಜೆಪಿ ಅಲ್ಪ ಸಂಖ್ಯಾತರಿಗೆ ಕಿರುಕುಳ ನೀಡುವ ಸಲುವಾಗಿ ರೂಪಿಸಿದ್ದ 2 ಕಾನೂನುಗಳನ್ನು ಕಾಂಗ್ರೆಸ್ ಸರ್ಕಾರವು ಯಥಾವತ್ ಮುಂದುವರೆಸಿದೆ ಎಂಬ ಆರೋಪಗಳು ಕೇಳಿ ಬರುತ್ತಿವೆ.

ಜೊತೆಗೆ ಆರ್‌ಎಸ್‌ಎಸ್ ವಿರುದ್ಧ ಟೀಕೆಗಳ ಮೂಲಕ ಅನಗತ್ಯವಾಗಿ ಹಿಂದೂ ಸಮುದಾಯ ಭಾವನೆಗಳಿಗೆ ಧಕ್ಕೆ ತರಲಾಗುತ್ತಿದೆ. ಕಾಂಗ್ರೆಸ್ ಪಕ್ಷದ ಮೂಲ ಸಿದ್ಧಾಂತ ಗಾಂಧಿ ತತ್ವ, ಇತ್ತೀಚೆಗೆ ಗಾಂಧೀ–ಜಿಯವರ ಕುರಿತಂತೆ ಅವಹೇಳನ ಮಾಡುವ, ಅಪಪ್ರಚಾರ ಮಾಡುವ ಸಂಗತಿಗಳು ಹೆಚ್ಚಾಗಿ ನಡೆಯುತ್ತಿವೆ. ಕಾಂಗ್ರೆಸ್ ಸರ್ಕಾರ ಅದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕಿತ್ತು. ಆದರೆ ಪೊಲೀಸರು ಈವರೆಗೂ ಒಂದು ಪ್ರಕರಣವನ್ನೂ ದಾಖಲಿಸಿಲ್ಲ ಎಂಬ ಆಕ್ಷೇಪಗಳಿವೆ.

ಕಾನೂನಿನ ತೊಡಕುಗಳನ್ನು ಮುಂದಿಟ್ಟುಕೊಂಡು ಗಾಂಧೀಜಿ ವಿರುದ್ಧ ನಡೆಯುತ್ತಿರುವ ಅಪಪ್ರಚಾರದ ಬಗ್ಗೆಯೂ ಕಾಂಗ್ರೆಸ್ ಸರ್ಕಾರ ಮೌನವಾಗಿರುವುದು ಸರಿಯಲ್ಲ ಎಂಬ ಆರೋಪಗಳಿವೆ?. ಗಾಂಧೀಜಿ ವಿರುದ್ಧ ಸುಳ್ಳು ಪ್ರಚಾರ ಮಾಡುವ ನಾಟಕಗಳು ನಿರಂತರವಾಗಿ ನಡೆಯುತ್ತಲೇ ಇದ್ದವು. ಅದನ್ನು ಪೊಲೀಸರು ಮತ್ತು ಗುಪ್ತದಳದ ಅಧಿಕಾರಿಗಳು ಕಂಡೂಕಾಣದಂತಿದ್ದರು. ಕೊನೆಗೆ ಕೆಪಿಸಿಸಿಯ ಅಧ್ಯಕ್ಷ ಬಿ.ಕೆ.ಹ–ರಿಪ್ರಸಾದ್ ಅವರು, ಮಧ್ಯ ಪ್ರವೇಶಿಸಿ ತಮ ಪಕ್ಷದ ಕಾರ್ಯಕರ್ತರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದರು. ಒಂದು ವೇಳೆ ಯಾರೂ ಪ್ರತಿಭಟಿಸದೇ ಇದ್ದರೆ, ನಾನೇ ಹೋರಾಟಕ್ಕಿಳಿಯಬೇಕಾಗುತ್ತದೆ ಎಂಬ ಎಚ್ಚ–ರಿಕೆ ನೀಡಿದ ಬಳಿಕ, ಯುವ ಕಾಂಗ್ರೆಸ್ಸಿಗರು ರಂಗಮಂದಿರಕ್ಕೆ ಹೋಗಿ ನಾಟಕ ಪ್ರದರ್ಶನಕ್ಕೆ ಅಡ್ಡಿ ಪಡಿಸಿದ್ದರು. ನಾಟಕಕಾರ ಅದ್ದಂಡ ಕ–ರಿಯಪ್ಪ ಅವರಿಗೆ ಮಸಿ ಬಳಿಯಲಾಯಿತು. ಪೊಲೀಸರು ನೋಟಿಸ್ ನೀಡಿ ವಿಚಾರಣೆಯ ಕಾಲ ಕಳೆಯುತ್ತಿದ್ದಾರೆ. ವಿರೋಧ ಪಕ್ಷದವರು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮುಂದಿಟ್ಟುಕೊಂಡು ಗಾಂಧೀಜಿ ವಿರುದ್ಧ ಅಪಪ್ರಚಾರಕ್ಕೆ ಬೆಂಬಲ ನೀಡುತ್ತಿದ್ದಾರೆ ಎಂಬ ಅಸಹನೆಗಳಿವೆ.

ಗೃಹ ಇಲಾಖೆ ಇಂತಹ ಸೂಕ್ಷ್ಮ ಪ್ರಕರಣಗಳಲ್ಲಿ ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕಿತ್ತು.

ವಚನ ದರ್ಶನ

ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು, ನೆನೆಯೊಳಗಣ
ಪರಿಮಳದಂತಿದ್ದಿತ್ತು,ಕೂಡಲಸಂಗಮದೇವಾ, ಕನ್ನೆಯ
ಸ್ನೇಹದಂತಿದ್ದಿತ್ತು

ನೀವು ಕೇಳುತ್ತಿರುವುದು ಶಿವಶರಣ ವಿಶ್ವಗುರು ಶ್ರೀ ಬಸವಣ್ಣನವರ ಪ್ರಸಿದ್ಧ ವಚನಗಳಲ್ಲೊಂದಾದ ಉದಕದೊಳಗೆ ಬಚ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು.

ಈ ವಚನದಲ್ಲಿ ವಿಶ್ವಗುರು ಬಸವಣ್ಣನವರು ಭಗವಂತನ ಕೂಡಲಸಂಗಮದೇವನ ಅಸ್ತಿತ್ವ ಮತ್ತು ಆತನ ಸಾಕ್ಷಾತ್ಕಾರದ ಅನುಭೂತಿಯನ್ನು ಅದ್ಭುತವಾದ ಉಪಮೆಗಳ ಮೂಲಕ ವಿವ-ರಿಸಿದ್ದಾರೆ.

ಉದಕದೊಳಗೆ ಬಚ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು: ನೀರಿನ ಆಳದಲ್ಲಿ ಅಡಗಿರುವ ಬಡಬಾಗ್ನಿಯಂತೆ (ಜ್ವಾಲೆ) ದೇವರ ಶಕ್ತಿ ಜಗತ್ತಿನ ಕಣಕಣದಲ್ಲೂ ಗುಪ್ತವಾಗಿ ಅಡಗಿದೆ. ನೀರು ಮತ್ತು ಬೆಂಕಿ ಪರಸ್ಪರ ವಿರುದ್ಧವಾಗಿದ್ದರೂ ನೀರೊಳಗೆ ಉಷ್ಣತೆ ಇರುವಂತೆ, ಪ್ರಕೃತಿಯಲ್ಲಿ ಭಗವಂತನು ಅದೃಶ್ಯನಾಗಿ ನೆಲೆಸಿದ್ದಾನೆ.

ಸಸಿಯೊಳಗಣ ರಸದ ರುಚಿಯಂತಿದ್ದಿತ್ತು
ಚಿಕ್ಕದಾದ ಸಸ್ಯ ಅಥವಾ ಗಿಡದೊಳಗೆ ಇರುವ ರಸದ ರುಚಿಂ-ಯನ್ನು ಮೇಲ್ನೋಟಕ್ಕೆ ನೋಡಿ ತಿಳಿಯಲು ಸಾಧ್ಯವಿಲ್ಲ, ಅದನ್ನು ಅನುಭವಿಸಿಯೇ ತಿಳಿಯಬೇಕು. ಹಾಗೆಯೇ ದೇವರನ್ನು ಕಣ್ಣಿಗೆ ಕಾಣದಿದ್ದರೂ ಅನುಭವದಿಂದ ಅರಿಯಬಹುದು.

ನೆನೆಯೊಳಗಣ ಮೊಗ್ಗಿನೊಳಗಣ ಪರಿಮಳದಂತಿದ್ದಿತ್ತು
ಹೂವಾಗುವ ಮುನ್ನ ಮೊಗ್ಗಿನೊಳಗೆ ಸುಗಂಧವು ಹೇಗೆ ಅಡಗಿರುತ್ತದೆಯೋ, ಹಾಗೆ ಭಗವಂತನ ಅಸ್ತಿತ್ವವು ಜಗತ್ತಿನಲ್ಲಿ ಅವಿಭಾಜ್ಯವಾಗಿದೆ. ಹೂವು ಅರಳಿದಾಗ ಪರಿಮಳ ಹರಡುವಂತೆ, ಭಕ್ತಿ ಪಕ್ವವಾದಾಗ ದೇವರು ಪ್ರಕಟನಾಗುತ್ತಾನೆ.

ಕನ್ನೆಯೊಳಗಣ ಒಲವಿನಂತಿದ್ದಿತ್ತು
ಒಬ್ಬ ಹೆಣ್ಣುಮಗಳ ಮನಸ್ಸಿನಲ್ಲಿರುವ ಪ್ರೀತಿ ಅಥವಾ ಒಲವು ಕಣ್ಣಿಗೆ ಕಾಣಿಸುವುದಿಲ್ಲ, ಆದರೆ ಅವಳು ಪ್ರೀತಿಸಿದಾಗ ಮಾತ್ರ ಅದು ವ್ಯಕ್ತವಾಗುತ್ತದೆ. ಅದೇ ರೀತಿ ಭಕ್ತನಲ್ಲಿ ನಿಜವಾದ ಭಕ್ತಿ ಮೂಡಿದಾಗ ಕೂಡಲಸಂಗಮದೇವನ ಸಾನ್ನಿಧ್ಯದ ಅರಿವಾಗುತ್ತದೆ.

ದೇವರು ಎಲ್ಲೋ ದೂರದಲ್ಲಿಲ್ಲ, ಅವನು ನಮ್ಮೊಳಗೇ, ಈ ಸೃಷ್ಟಿಯ ಪ್ರತಿ ಜೀವಿಯಲ್ಲೂ ಅತ್ಯಂತ ಸೂಕ್ಷ್ಮವಾಗಿ, ಅದೃಶ್ಯವಾಗಿ ಹಾಸುಹೊಕ್ಕಾಗಿದ್ದಾನೆ ಎಂಬುದನ್ನು ಬಸವಣ್ಣನವರು ಈ ವಚನದಲ್ಲಿ ತಿಳಿಸಿಕೊಟ್ಟಿದ್ದಾರೆ.ಬಸವಾದಿ ಶರಣರ ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ-ಸಿಂಧನೂರು. 998094144

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಭರದಿಂದ ಸಾಗಿದ "ಮೋನಿ ಎಸ್ಟೇಟ್" ಚಿತ್ರೀಕರಣ



❑ ನೈಜ್ಯ ದೆಸೆ ನ್ಯೂಸ್

ಮಡಿಕೇರಿ: ಮೋನಿನ ಸಿನಿ ಕ್ರಿಯೇಶನ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ "ಮೋನಿ ಎಸ್ಟೇಟ್" ಕನ್ನಡ ಚಲನಚಿತ್ರದ ಚಿತ್ರೀಕರಣ ಭರದಿಂದ ಸಾಗಿದೆ. ಕಣ್ಣಳ್ಳಿಯ ಶ್ರೀವೀರಭದ್ರೇಶ್ವರ ದೇವಸ್ಥಾನದಲ್ಲಿ ಮುಹೂರ್ತದೊಂದಿಗೆ ಆರಂಭಿಸಿ ಮಡಿಕೇರಿ ಸುತ್ತಮುತ್ತ ಮತ್ತು ಭಗವತಿ ಕಾರ್ಟೇಜ್‌ನಲ್ಲಿ ಹಲವರು ದೃಶ್ಯಗಳನ್ನು ಚಿತ್ರೀಕರಿಸಲಾಯಿತು.

ಚಿತ್ರದ ನಿರ್ಮಾಣ ಮತ್ತು ನಿರ್ವಹಣೆಯನ್ನು "ಮೋಹನ್ ಬಿ" ಸಹನಿರ್ಮಾಪಕರಾಗಿ ಸಂಜು ಶ್ರೀ ಮಹಾದೇವ್ ವಹಿಸಿಕೊಂಡಿದ್ದು ಮೊದಲ ಬಾರಿಗೆ ನಾಯಕರಾಗಿ ಬಣ್ಣ ಹಚ್ಚುತ್ತಿದ್ದಾರೆ. ಕಲಾವಿದರಾಗಿ ನಾಯಕ ನಟ ಮೋಹನ್, ನಾಯಕಿಯಾಗಿ ಸ್ನೇಹ ಜಾದವ್, ಹರೀಶ್ ಎ ವಿ, ಮೇಘನಾ, ಷಣ್ಮುಖ ವೈಭವಿ, ರಾಗನ, ರಾಮನ್ ಮೈಸೂರು, ಅಜಯ್ ರಾಯಚೂರ್, ಲಕ್ಷ್ಮಿ, ಬಸು ಆಚಾರ್ಯ, ನಾನ್ ಸಿಂಕ್ ಬಸು, ಚಂದ್ರಪ್ರಭ, ಗೋವಿಂದ್ ಗೌಡ ಮೊದಲಾದ ಕಲಾವಿದರು ಅಭಿನಯಿಸುತ್ತಿದ್ದಾರೆ.

ತಾಂತ್ರಿಕ ವರ್ಗದಲ್ಲಿ ರಘು ರೂಗಿ (ಹುಬ್ಬಳ್ಳಿ) ಛಾಯಾಗ್ರಹಣ- ಕಥೆ-ಚಿತ್ರಕಥೆ-ಸಾಹಿತ್ಯದ ಜೊತೆಗೆ ನಿರ್ದೇಶನವನ್ನು ಮಾಡುತ್ತಿದ್ದಾರೆ. ಸಾಹಿತ್ಯ ನಿರಂತರ ವೀರಂತ್ ಕೆರೂರ, ಎಟಿ ರವೀಶ್ ಪ್ರೊಡಕ್ಷನ್ ಬಾಂಧ್ಯ (ಗದಗ್), ಎನ್ ಬಿ ನಾಗೇಶ್ (ಗದಗ್), ಸಂಗೀತ ಎ ಟಿ ರವೀಶ್, ಸಂಕಲನ ಕೃಷ್ಣ ಎಂ ಚೆನಕೆರೆ, ಸ್ಥಿರಚಿತ್ರಣ ಅಜೆಯ್ ಲಿಂಗಸೂರ, ಸಾಗರ್ ಲಿಂಗಸೂರ, ಡ್ರೋನ್ ಆಪರೇಟ್ ರಂಜಿತ್ ಲಿಂಗಸೂರ, ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ, ಕಲಾವಿಭಾಗದಲ್ಲಿ ಫ್ರೆಂಡ್ಶಿಪ್ ವೆಂಕಟೇಶ್ ಯಾದವ್, ನಿರ್ದೇಶನ ತಂಡದಲ್ಲಿ ಭರತ್ ಕುಮಾರ್ ಎಂ, ಶ್ರೀಧರ್ ಡಿ ನಡುಗೇರಿ, ವಿನಯ್ ಡಿಯರ್, ಶಾಂತಕುಮಾರ್, ವೆಂಕಟೇಶ್ ಯಾದವ್, ವೇದ ವಜ್ರಮುನಿ, ನಿರ್ಮಾಣ ಮೋಹನ್, ಸಹ ನಿರ್ಮಾಪಕರು ಸಂಜು ಶ್ರೀ ಮಹಾದೇವ್, ಧನರಾಜ್ ಕೆಆರ್ ಎಕ್ಸಿಕ್ಯೂಟಿವ್ ಪ್ರೊಡ್ಯೂಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

-ಡಾ.ಪ್ರಭು ಗಂಜಿಹಾಳ

ಕೆಂಪೇಗೌಡ ವೃತ್ತದ ಅಭಿವೃದ್ಧಿ ಕಾಮಗಾರಿಗಳು ಹಾಗೂ ಸ್ಥಳಾಂತರಿಸಲಾದ ಮರಗಳ ಪರಿಶೀಲನೆ ನಡೆಸಿದ ಸಂಸದ ಯದುವೀರ್ ಒಡೆಯರ್



❑ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಮಾನ್ಯ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಇಂದು ಮೈಸೂರಿನ ಕೆಂಪೇಗೌಡ ವೃತ್ತ (ಮಣಿಪಾಲ್ ಸರ್ಕಲ್)ಕ್ಕೆ ಭೇಟಿ ನೀಡಿ, ಅಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲನೆ ನಡೆಸಿದರು ಈ ಸಂದರ್ಭದಲ್ಲಿ ಸಂಸದರುಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕಾಮಗಾ-ರಿಗಳ ಪ್ರಗತಿಯ ಕುರಿತು ಚರ್ಚಿಸಿ, ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವುದು, ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಹಾಗೂ ಸಾರ್ವಜನಿಕರಿಗೆ ಉಂಟಾಗುವ ಅನಾನುಕೂಲಗಳನ್ನು ಕಡಿಮೆ ಮಾಡುವಂತೆ ಅಧಿಕಾರಿಗಳಿಗೆ ಸಂಸದರು ಸೂಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ಯದುವೀರ್ ಒಡೆಯರ್ ಅವರು, "ಕೆಂಪೇಗೌಡ ವೃತ್ತವು ಮೈಸೂರಿನ ಪ್ರಮುಖ ಸಂಚಾರ ಕೇಂದ್ರವಾಗಿದ್ದು, ಪ್ರತಿದಿನ ಸಾವಿರಾರು ವಾಹನಗಳು ಹಾಗೂ ಸಾರ್ವಜನಿಕರು ಈ ಮಾರ್ಗವನ್ನು ಬಳಸುತ್ತಾರೆ. ಇಲ್ಲಿ ನಡೆಯುತ್ತಿರುವ ಕಾಮಗಾರಿಗಳು ಸುಗಮ ಸಂಚಾರ, ರಸ್ತೆ ಸುರಕ್ಷತೆ ಮತ್ತು ಉತ್ತಮ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ಮಹತ್ವದ್ದಾಗಿವೆ.

ಕಾಮಗಾರಿಗಳ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ, ಅವುಗಳನ್ನು ತ್ವರಿತವಾಗಿ ಹಾಗೂ ನಿಗದಿತ ಸಮಯದೊಳಗೆ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾ-ರಿಗಳಿಗೆ ಸೂಚಿಸಿದ್ದೇನೆ," ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ, ಕಾಮಗಾರಿಗಳ ಹಿನ್ನೆಲೆಯಲ್ಲಿ ಸ್ಥಳಾಂತರಿಸಲಾದ ಮರಗಳನ್ನು ನೆಡಲಾಗಿರುವ ಉದ್ಯಾನವನಗಳಿಗೂ ಸಂಸದರು ಭೇಟಿ ನೀಡಿ ಪರಿಶೀಲಿಸಿದರು. ಪ್ರಸ್ತುತ ಸ್ಥಳಾಂತರಿಸಲಾದ ಮರಗಳ ಶೇಕಡಾ 95ರಷ್ಟು ಮರಗಳು ಬದುಕುಳಿದಿದ್ದು, ಇದು ಆಶಾದಾಯಕ ಬೆಳವಣಿಗೆಯಾಗಿದೆ ಎಂದು ಅವರು ತಿಳಿಸಿದರು.

"ಮರಗಳ ಸ್ಥಳಾಂತರವು ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಮಹತ್ವದ ಕಾರ್ಯವಾಗಿದೆ. ಪ್ರಸ್ತುತ ಶೇಕಡಾ 95ರಷ್ಟು ಮರಗಳು ಬದುಕುಳಿದಿರುವುದು ಸಂತೋಷದ ಸಂಗತಿ. ನಮ್ಮ ಜವಾಬ್ದಾರಿ ಇಲ್ಲಿಗೆ ಮುಗಿಯುವುದಿಲ್ಲ.

ಸ್ಥಳಾಂತರಿಸಲಾದ ಪ್ರತಿಯೊಂದು ಮರದ ಆರೋಗ್ಯ ಮತ್ತು ಬೆಳವಣಿಗೆಯನ್ನು ನಾವು ನಿಕಟವಾಗಿ ಗಮನಿಸುತ್ತಿದ್ದು, ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದೇವೆ. ಮರಗಳು ಉತ್ತಮವಾಗಿ ಬೆಳೆಯುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ," ಎಂದು ಸಂಸದರು ಹೇಳಿದರು.

ಮೂಲಸೌಕರ್ಯ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಎರಡೂ ಸಮಾನ ಮಹತ್ವ ಹೊಂದಿದ್ದು, ಅಭಿವೃದ್ಧಿ ಕಾರ್ಯಗಳು ಪರಿಸರದ ಮೇಲೆ ಕನಿಷ್ಠ ಪರಿಣಾಮ ಬೀರುವಂತೆ ನೋಡಿಕೊಳ್ಳುವುದು ಅಗತ್ಯ ಎಂದು ಅವರು ಒತ್ತಿಹೇಳಿದರು. ಮೈಸೂರು?ಕೊಡಗು ಕ್ಷೇತ್ರದ ಪ್ರಮುಖ ಮೂಲಸೌಕರ್ಯ ಯೋಜನೆಗಳ ಪ್ರಗತಿಯನ್ನು ನಿರಂತರವಾಗಿ ಪರಿಶೀಲಿಸಿ, ಅಭಿವೃದ್ಧಿ ಕಾಮಗಾ-ರಿಗಳ ಪ್ರಯೋಜನಗಳು ಜನರಿಗೆ ತಲುಪುವಂತೆ ಕಾರ್ಯನಿರ್ವಹಿಸುವುದಾಗಿ ಸಂಸದರು ಪುನರುಚ್ಚರಿಸಿದರು. ಈ ಸಂದರ್ಭದಲ್ಲಿ ಅಧಿಕಾರಿಗಳು ಮುಖಂಡರು ಹಾಜರಿದ್ದರು

ಪರಿಸರ ಸಂರಕ್ಷಣೆಗಾಗಿ ಸಾರ್ವಜನಿಕ ಸಾರಿಗೆಯ ಬಳಕೆ ಅಗತ್ಯ

❑ ನೈಜ್ಯ ದೆಸೆ ನ್ಯೂಸ್

ಕಲಬುರಗಿ: ಎಲ್ಲರು ವೈಯಕ್ತಿಯ ವಾಹನಗಳನ್ನು ಬಳಸುವುದುರಿಂದ ಪೆಟ್ರೋಲಿಯಂ ಆಮದಿನ ಪ್ರಮಾಣ ಹೆಚ್ಚಾಗುತ್ತದೆ. ವಾಯು, ಶಬ್ದ ಮಾಲಿನ್ಯ ಅಧಿಕವಾಗಿ ಪರಿಸರ ಮಾಲಿನ್ಯವಾಗುತ್ತದೆ. ಆದ್ದರಿಂದ ಸಾರ್ವಜನಿಕ ಸಾರಿಗೆಯ ಬಳಕೆಗೆ ಆದ್ಯತೆ ನೀಡುವುದು ಅಗತ್ಯವಾಗಿದೆ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ ಹೇಳಿದರು.



ನಗರದ ಆಳಂದ ರಸ್ತೆಯ ಖಾದ್ರಿ ಚೌಕ್‌ನಲ್ಲಿರುವ 'ಸಕ್ಸಸ್ ಕಂಪ್ಯೂಟರ ತರಬೇತಿ ಕೇಂದ್ರ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ 'ವಿಶ್ವ ಸಾರ್ವಜನಿಕ ಸಾರಿಗೆ ದಿನಾಚರಣೆ'ಯಲ್ಲಿ ಅವರು ಮಾತನಾಡುತ್ತಿದ್ದರು.

ಜಗತ್ತಿನಾದ್ಯಂತ ಅಸಂಖ್ಯಾತ ಜನರು ಪ್ರಯಾಣಕ್ಕಾಗಿ ಸಾರ್ವಜನಿಕ ಸಾರಿಗೆಯನ್ನು ನೆಚ್ಚಿಕೊಂಡಿದ್ದಾರೆ. ಪರಿಸರ ಸಂರಕ್ಷಣೆ, ಟ್ರಾಫಿಕ್ ಸಮಸ್ಯೆ ಸೇರಿದಂತೆ ಮುಂತಾದ ಸಮಸ್ಯೆಗಳಿಗೆ ಸಾರ್ವಜನಿಕ ಸಾರಿಗೆ ಪರಿಹಾರವಾಗಿದೆ. ಇದರ ಬಗ್ಗೆ ಜನ ಜಾಗೃತಿ ಮೂಡಿಸುವ ಸಲುವಾಗಿ ನ.10ರಂದು ದಿನವನ್ನು ಆಚರಿಸಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕಂಪ್ಯೂಟ-ರ ತರಬೇತಿ ಸಂಸ್ಥೆಯ ಅಧ್ಯಕ್ಷ ಅಸ್ಲಾಂ ಶೇಖ್, ಸಮಾಜ ಸೇವಕ ಶಿವಯೋಗೆಪ್ಪಾ ಎಸ್.ಬಿರಾದಾರ, ಸಮಾಜ ಸೇವಕ ಓಂಕಾರ ವಠಾರ, ಉಪನ್ಯಾಸಕ ಮಹಾದೇವ ಬಿರಾದಾರ ಸೇರಿದಂತೆ ಇನ್ನಿತರರಿದ್ದರು.


ಹೆಗಲ ಮೇಲೆ ಕಟ್ಟಿಗೆಯ ಹೊರೆ – ಹೃದಯದಲ್ಲಿ ಲಕ್ಷಾಂತರ ಭಕ್ತರ ಹಸಿವಿನ ಹೊಣೆ

ದಾಸೋಹವೆಂಬುದು ಕೇವಲ ಅನ್ನ ನೀಡುವ ಕಾರ್ಯವಲ್ಲ; ಅದು ಹಸಿದವರ ಹೃದಯಕ್ಕೆ ತಲುಪುವ ಮಾನವೀಯತೆಯ ಮಹಾಸೇವೆ

❑ ನೈಜ್ಯ ದೆಸೆ ನ್ಯೂಸ್

ಕೊಪ್ಪಳ: ಪವಿತ್ರ ನೆಲದಲ್ಲಿ ಭಕ್ತಿ, ಭಾವೈಕ್ಯತೆ, ಕಾಯಕ ಮತ್ತು ದಾಸೋಹದ ಪರಂಪರೆಯನ್ನು ಜಗತ್ತಿಗೆ ಸಾರುತ್ತಿರುವ ಗವಿಮಠದ ಜಾತ್ರಾ ಮಹೋತ್ಸವವೆಂದರೆ ಅದೊಂದು ಸಾಮಾನ್ಯ ಧಾರ್ಮಿಕ ಉತ್ಸವವಲ್ಲ. ಅದು ಲಕ್ಷಾಂತರ ಭಕ್ತರ ನಂಬಿಕೆಯ ಸಂಗಮ, ಮಾನವೀಯ ಮೌಲ್ಯಗಳ ಮಹಾಪರ್ವ ಹಾಗೂ ಅನ್ನದಾಸೋಹದ ಮೂಲಕ ಸೇವೆಯ ಸಾಥ-ರ್ಕತೆಯನ್ನು ಸಾರುವ ಪುಣ್ಯಕ್ಷೇತ್ರದ ಮಹಾಸಂಭ್ರಮ. ಪ್ರತಿ ವರ್ಷದಂತೆ 2027ನೇ ಸಾಲಿನ ಗವಿಮಠದ ಜಾತ್ರಾ ಮಹೋತ್ಸವದ ಸಿದ್ಧತೆಗಳು ಈಗಾಗಲೇ ಆರಂಭಗೊಂಡಿದೆ.

ಜಾತ್ರೆಯ ದಿನಗಳಲ್ಲಿ ನಾಡಿನ ಮೂಲೆ ಮೂಲೆಗಳಿಂದ ಭಕ್ತಸಾಗರವೇ ಗವಿಮಠದತ್ತ ಹ-ರಿದುಬರುತ್ತದೆ. ಬರುವ ಪ್ರತಿಯೊಬ್ಬ ಭಕ್ತನಿಗೂ ಅನ್ನ, ಆತಿಥ್ಯ ಹಾಗೂ ಆತ್ಮೀಯತೆಯ ಸೇವೆ ದೊರೆಯಬೇಕೆಂಬ ಮಹತ್ತರ ಸಂಕಲ್ಪದೊಂದಿಗೆ ದಾಸೋಹದ ಸಿದ್ಧತೆಗಳು ನಡೆಯುತ್ತಿವೆ. ಈ ಸಿದ್ಧತೆಯ ನಡುವೆ ಕಂಡುಬರುವ ಒಂದು ದೃಶ್ಯ ಮಾತ್ರ ಪ್ರತಿಯೊಬ್ಬರ ಮನಸ್ಸನ್ನೂ ಆಳವಾಗಿ ಸ್ಪರ್ಶಿಸುತ್ತದೆ. ಲಕ್ಷಾಂತರ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆ ಮಾಡುವ ಪೂಜ್ಯ ಗವಿಮಠದ ಶ್ರೀಗಳೇ ಸ್ವತಃ ತಮ್ಮ ಹೆಗಲ ಮೇಲೆ ಕಟ್ಟಿಗೆಯನ್ನು ಹೊತ್ತು ಸಾಗುತ್ತಿರುವ ದೃಶ್ಯ! ನೋಡಲು ಇದು ಕೇವಲ ಕಟ್ಟಿಗೆಯನ್ನು ಹೊತ್ತು ಸಾಗುವ ಒಂದು ಕ್ಷಣವಾಗಿರಬಹುದು. ಆದ-ರೆ ಅದರ ಹಿಂದಿರುವ ಭಾವನೆ, ಕಾಳಜಿ ಮತ್ತು ಸೇವಾ ಸಂಕಲ್ಪವನ್ನು ಅರ್ಥಮಾಡಿಕೊಂಡಾಗ ಅದರ ಮಹತ್ವ ಅಪಾರವಾಗಿ ಗೋಚರಿಸುತ್ತದೆ. ಒಂದು ಕಡೆ ಭಕ್ತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಮತ್ತೊಂದು ಕಡೆ ಪ್ರತಿಯೊಬ್ಬ ಭಕ್ತನಿಗೂ ಯಾವುದೇ ಕೊರತೆಯಾಗದಂತೆ



ಅನ್ನದಾಸೋಹ ನಡೆಯಬೇಕೆಂಬ ಕಾಳಜಿ ಶ್ರೀಗಳ ಮನಸ್ಸಿನಲ್ಲಿದೆ. ಸಾವಿರಾರು ಒಲೆಗಳು ಉರಿಯಬೇಕಾದರೆ ಅದಕ್ಕೆ ಬೇಕಾಗುವ ಕಟ್ಟಿಗೆ, ಆಹಾರ ಪದಾರ್ಥಗಳು, ಅಡುಗೆ ಸಿದ್ಧತೆಗಳು, ಸ್ವಯಂಸೇವಕರ ಪರಿಶ್ರಮ ಹೀಗೆ ಪ್ರತಿಯೊಂದು ಕಾರ್ಯದ ಹಿಂದೆಯೂ ಶ್ರೀಗಳ ದೂರದೃಷ್ಟಿ ಮತ್ತು ಮುಂಚಿತವಾದ ಯೋಜನೆ ಅಡಗಿದೆ.

ಶ್ರೀಗಳ ಹೆಗಲ ಮೇಲೆ ಕಾಣುತ್ತಿರುವುದು ಕಟ್ಟಿಗೆಯ ಹೊರೆಯಾದರೂ, ಅವರ ಹೃದಯದಲ್ಲಿ ಹೊತ್ತಿರುವುದು ಲಕ್ಷಾಂತರ ಭಕ್ತರ ಹಸಿವು ನೀಗಿಸುವ ಮಹತ್ತರ ಜವಾಬ್ದಾರಿ: ನಿಜವಾದ ಮಹಾತ್ಮರು ಕೇವಲ ಉಪದೇಶ ಮಾಡುವುದಿಲ್ಲ; ತಮ್ಮ ಬದುಕಿನ ಪ್ರತಿಯೊಂದು ನಡೆಯಲ್ಲಿಯೂ ಆದರ್ಶವನ್ನು ತೋರಿಸುತ್ತಾರೆ ಎಂಬುದಕ್ಕೆ ಈ ದೃಶ್ಯವೇ ಜೀವಂತ ಉದಾಹರಣೆ. ಸೇವೆಗೆ ಸ್ಥಾನಮಾನದ ಹಂಗಿಲ್ಲ, ದಾಸೋಹಕ್ಕೆ ಆಡಂಬರದ ಅವಶ್ಯಕತೆಯಿಲ್ಲ, ಮಾನವೀಯತೆಗೆ ಅಧಿಕಾರದ ಮಿತಿಯಿಲ್ಲ ಎಂಬ ಸಂದೇಶವನ್ನು ಪೂಜ್ಯ ಶ್ರೀಗಳು ತಮ್ಮ ಸರಳ ನಡೆ ಮತ್ತು ಕಾಯಕದ ಮೂಲಕ ಸಾರುತ್ತಿದ್ದಾರೆ. ಇಲ್ಲಿ ಶ್ರೀಗಳ ಸರಳತೆಯನ್ನು ಮೆಚ್ಚುವುದಷ್ಟೇ ಮುಖ್ಯವಲ್ಲ;ಅದರ ಹಿಂದಿರುವ ವಿಶಾಲ ಹೃದಯವನ್ನು ಅರ್ಥಮಾಡಿಕೊಳ್ಳುವುದು ಇನ್ನೂ ಮುಖ್ಯ.

ತಾವು ಕುಳಿತುಕೊಂಡು ಮಾಡಿಸಬಹುದಾದ ಕೆಲಸವನ್ನು ಸ್ವತಃ ಮುಂದೆ ನಿಂತು ಮಾಡುವ ಮನೋಭಾವ, ಪ್ರತಿಯೊಂದು



ಲೇಖನ: ಶಂಕರ್ ಚಾಗಿ ಪ್ರಥಮ ದರ್ಜೆ ಸಹಾಯಕರು ಜಿಲ್ಲಾ ವಿಮಾ ಇಲಾಖೆ, ಕೊಪ್ಪಳ.

ಸಿದ್ಧತೆಯನ್ನೂ ತಮ್ಮದೇ ಜವಾಬ್ದಾರಿಯೆಂದು ಭಾವಿಸುವ ಗುಣ, ಭಕ್ತರ ಸೇವೆಯಲ್ಲಿಯೇ ಭಗವಂತನನ್ನು ಕಾಣುವ ದೃಷ್ಟಿಕೋನ ಇವೆಲ್ಲವೂ ನಿಜವಾದ ಗುರುಪರಂಪರೆಯ ಶ್ರೇಷ್ಠ ಮೌಲ್ಯಗಳಾಗಿವೆ. ಗವಿಮಠದ ಜಾತ್ರೆಗೆ ಬರುವ ಭಕ್ತರಿಗೆ ಇಲ್ಲಿ ಜಾತಿ, ಧರ್ಮ, ಭಾಷೆ, ಬಡವ, ಶ್ರೀಮಂತ ಎಂಬ ಯಾವುದೇ ಭೇದವಿಲ್ಲ. ಎಲ್ಲರಿಗೂ ಒಂದೇ ರೀತಿಯ ಅನ್ನ, ಒಂದೇ ರೀತಿಯ ಆತ್ಮೀಯತೆ ಮತ್ತು ಒಂದೇ ರೀತಿಯ ಗೌರವ.

ಇದೇ ದಾಸೋಹದ ನಿಜವಾದ ತತ್ವ. ಇದೇ ಬಸವಣ್ಣನವರ ಕಾಯಕ ಮತ್ತು ದಾಸೋಹದ ಆಶಯವನ್ನು ನೆನಪಿಸುವ ಮಾನವೀಯ ಸಂದೇಶ. ವರ್ಷದಿಂದ ವರ್ಷಕ್ಕೆ ಭಕ್ತಸಾಗರ ಹೆಚ್ಚಾಗುತ್ತಿದ್ದರೂ, ದಾಸೋಹದ ಸೇವಾ ಮನೋಭಾವ ಮಾತ್ರ ಇನ್ನಷ್ಟು ವಿಶಾಲವಾಗುತ್ತಿದೆ. ಈ ಮಹಾಸೇವೆಯ ಹಿಂದೆ ಅನೇಕ ಭಕ್ತರ ಸಹಕಾರ, ಸ್ವಯಂಸೇವಕರ ಪರಿಶ್ರಮ ಮತ್ತು ಶ್ರೀಗಳ ಮಾರ್ಗದರ್ಶನ ಒಂದಾಗಿ ಬೆರೆತಿವೆ. ನನ್ನ ದೃಷ್ಟಿಯಲ್ಲಿ ಈ ಒಂದು ಚಿತ್ರ ಸಾವಿರಾರು ಮಾತುಗಳಿಗಿಂತ ಹೆಚ್ಚಿನ ಸಂದೇಶವನ್ನು ನೀಡುತ್ತದೆ. ಏಕೆಂದರೆ ಇಲ್ಲಿ ಕಾಣುವುದು ಕೇವಲ ಒಬ್ಬ ಶ್ರೀಗಳ ಚಿತ್ರವಲ್ಲ; ಸೇವೆಯೇ ಸಾಧನೆ, ಕಾಯಕವೇ ಕೈಲಾಸ, ಹಸಿದವರಿಗೆ ಅನ್ನ ನೀಡುವುದೇ ಪರಮಧರ್ಮ ಎಂಬ ತತ್ವದ ಪ್ರತಿಬಿಂಬ. ಒಂದು ಕ್ಷಣ ಯೋಚಿಸಿ: ದೇವರ ದರ್ಶನಕ್ಕಾಗಿ ಲಕ್ಷಾಂತರ ಭಕ್ತರು ಮಠಕ್ಕೆ ಬರುತ್ತಾರೆ.

ಆದರೆ ಆ ಭಕ್ತರ ಹಸಿವು ನೀಗಿಸಲು ದೇವರ ಸೇವಕನಂತೆ ಸ್ವತಃ ಕಟ್ಟಿಗೆ ಹೊತ್ತು ಸಾಗುವ ಶ್ರೀಗಳ ಮನಸ್ಸಿನಲ್ಲಿರುವ ಭಕ್ತಿ ಎಷ್ಟೊಂದು ವಿಶಾಲವಾಗಿರಬಹುದು! ಇಂತಹ ದೃಶ್ಯಗಳು ಕೇವಲ ಛಾಯಾಚಿತ್ರಗಳಾಗಿ ಉಳಿಯಬಾರದು; ನಮ್ಮ ಬದುಕಿನ ಆದ-ರ್ಶಗಳಾಗಿ ಮೂಡಿಬರಬೇಕು.

ಸೇವೆ ಮಾಡಲು ದೊಡ್ಡ ಸ್ಥಾನಮಾನ ಬೇಕಿಲ್ಲ, ದೊಡ್ಡ ಮನಸ್ಸಿದ್ದರೆ ಸಾಕು ಎಂಬುದನ್ನು ಮುಂದಿನ ಪೀಳಿಗೆಗೆ ತಿಳಿಸುವಂತಹ ಅಪರೂಪದ ಕ್ಷಣಗಳಿವು. ಪೂಜ್ಯ ಶ್ರೀಗಳ ಇಂತಹ ಸೇವಾ ಸಂಕಲ್ಪಕ್ಕೆ, ದಾಸೋಹದ ಕಾಳಜಿಗೆ, ಸರಳತೆಗೆ ಮತ್ತು ಮಾನವೀಯ ಮೌಲ್ಯಗಳಿಗೆ ನನ್ನ ಹೃತ್ಪೂರ್ವಕ ಶರಣು ಶರಣಾರ್ಥಿಗಳು. ಗವಿಮಠದ ಈ ಮಹಾದಾಸೋಹ ಪರಂಪರೆ ಯುಗಯುಗಾಂತರಗಳವರೆಗೆ ಹೀಗೆ ಮುಂದುವ-ರಿಯಲಿ. 2027ನೇ ಸಾಲಿನ ಜಾತ್ರಾ ಮಹೋತ್ಸವವು ಭಕ್ತಿ, ಶ್ರದ್ಧೆ, ಸೇವೆ ಮತ್ತು ಸಮರ್ಪಣೆಯ ಹೊಸ ಇತಿಹಾಸವನ್ನು ನಿರ್ಮಿಸಲಿ. ನಾಡಿನ ಎಲ್ಲ ಭಕ್ತರಿಗೂ ಶ್ರೀ ಗವಿಸಿದ್ಧೇಶ್ವರ ಸ್ವಾಮಿಗಳ ಆಶೀರ್ವಾದ ಸದಾ ಇರಲಿ ಎಂದು ಹಾರೈಸುತ್ತೇನೆ. ಶರಣು ಶರಣಾರ್ಥಿಗಳು? ಜೈ ಗವಿಸಿದ್ಧೇಶ್ವರ!

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101